JSS Mahavidyapeetha, Mysore - 04

**JSS INSTITUTE OF EDUCATION**

(Recognized by the NCTE and Affiliated to university Mysore, Mysore)

Sakleshpur – 573134, PB No 26, Hassan Dist.

Email: jssioebedskp@gmail.com website: https://jssioebedskp.org.in Phone No: 97405 91647

# Criterion – 03: Research & Outreach Activities

## Key Indicator 3.3-Outreach Activities




**Metric No. 3.3.1 Average number of outreach activities organized by the institution during the last five years**

## 2020-21

## ಕೋವಿಡ್–19 ರ ಜಾಗೃತಿ (COVID-19 Awareness)

ಕರೋನ ವೈರಾಣುಗಳು ಜೈವಿಕ ಬಾಂಬ್ ರೀತಿ ಕಾರ್ಯನಿರ್ವಹಿಸುತ್ತಿದ್ದು ಯುದ್ಧಕ್ಕಿಂತ ಭೀಕರವಾದ ಪರಿಣಾವನ್ನೇ ಉಂಟುಮಾಡುತ್ತಿತ್ತು. ಯುದ್ಧಗಳಲ್ಲಿ ಸೈನಿಕರು ಶತ್ರು ಸೈನಿಕರನ್ನು ಬಡಿದು ಹೋಡಿಸಲು ಹಗಲು–ರಾತ್ರಿ ಹೋರಾಡಿ ದೇಶದ ಸುರಕ್ಷತೆಗೆ ಶ್ರಮಿಸುವರು. ಕರೋನ ವೈರಾಣುಗಳಿಂದ ತಪ್ಪಿಸಿಕೊಳ್ಳಲು ಜನರು ಸೈನಿಕರಷ್ಟು ಹಗಲು–ರಾತ್ರಿ ಕಷ್ಟಪಡಬೇಕಾಗಿಲ್ಲ. ಬದಲಾಗಿ ಜನರೆಲ್ಲರೂ ತಮ್ಮ ತಮ್ಮ ಮನೆಯಲ್ಲಿಯೇ ಇದ್ದು, ಅಗತ್ಯವಿದ್ದಲ್ಲಿ ಮಾತ್ರ ಮನೆಯಿಂದ ಹೊರಬಂದು, ಸಾಮಾಜಿಕ ಮತ್ತು ದೈಹಿಕ ಅಂತರವನ್ನು ಕಾಯ್ದುಕೊಂಡು, ಸರ್ಕಾರ ಮತ್ತು ತಜ್ಞರು ನೀಡುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಹೋದರೆ ಈ ಒಂದು ಕರೋನ ವೈರಾಣುಗಳನ್ನು ಹಿಮ್ಮೆಟ್ಟಿಸುವ ಯುದ್ಧದಲ್ಲಿ ಜಯ ಸಾಧಿಸಬಹುದು. ಇದೇ ಜನರು ದೇಶಕ್ಕೆ ಸಲ್ಲಿಸಬಹುದಾದ ನಿಜವಾದ ಸೇವೆಯಲ್ಲವೇ? ಇಲ್ಲವಾದಲ್ಲಿ, ಸಂಪೂರ್ಣ ರಾಜ್ಯ, ಅಷ್ಟೇ ಯಾಕೆ? ಇಡೀ ದೇಶವನ್ನೇ ಆವರಿಸಿ ಎಲ್ಲರನ್ನೂ ಬಲಿತೆಗೆದುಕೊಳ್ಳುವುದು ಅಕ್ಷರಶಃ ಸತ್ಯ. ‘ಲಾಕ್ ಡೌನ್’ ಅನ್ನು ಯಥಾವತ್ತಾಗಿ ಮುಂದುವರೆಸಿದರೂ ಆಶ್ಚರ್ಯವೇನಿಲ್ಲ. ಎಲ್ಲಿಯವರೆಗೆ ನೂರಕ್ಕೆ ನೂರರಷ್ಟು ಜನ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸದೇ, ಸರ್ಕಾರದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸದೇ, ಬೇಜವಾಬ್ದಾರಿ ಮತ್ತು ನಿರ್ಲಕ್ಷತೆಯನ್ನು ತೋರುವರೋ, ಅಲ್ಲಿಯವರೆಗೂ ಜನರು ತಮ್ಮ ನೈಜ ಸ್ಥಿತಿಗೆ ಮತ್ತು ಸಮಾಜ ತನ್ನ ಸಹಜ ಸ್ಥಿತಿಗೆ ಬರಲು ಸಾಧ್ಯವಾಗದೆ ತ್ರಿಶಂಕು ಸ್ಥಿತಿಯಲ್ಲಿ ಜೀವನ ನಡೆಸಬೇಕಾಗುತ್ತದೆ ಎಂಬ ಅಂಶವನ್ನು ಅರಿತು ದಿನಾಂಕ **27–03–2021** ರಂದು ಕೋವಿಡ್–19 ರ ಜಾಗೃತಿ (COVID-19 Awareness) ಕುರಿತು ಜಾಥಾವನ್ನು ಕೌಡಳ್ಳಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು.




**“Covid – 19 Awareness** Jatha**”**, 27-03-2021



Start of Covid-19 Awareness Jatha, 27-03-2021



Jatha moving in the Streets of Kowdalli, 27-03-2021



Jatha at the ircle of Kowdalli, 27-03-2021



Jatha Moving in the Streets of Kowdalli, 27-03-2021



Jatha Moving in the Streets of Kowdalli, 27-03-2021



Jatha Moving in the Streets of Kowdalli, 27-03-2021



Jatha Moving in the Streets of Kowdalli, 27-03-2021

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

JSS Mahavidyapeetha, Mysore - 04

**JSS INSTITUTE OF EDUCATION**

**(Recognized by the NCTE and Affiliated to university Mysore, Mysore)**

**Sakleshpur – 573134, PB No 26, Hassan Dist.**

**Email: jssioebedskp@gmail.com website: https://jssioebedskp.org.in Phone No: 97405 91647**

# Criterion – 03: Research & Outreach Activities

## Key Indicator 3.3-Outreach Activities






**Metric No. 3.3.1 Average number of outreach activities organized by the institution during the last five years**

## 2021-22

## 1. ಕೌಡಳ್ಳಿ ಗ್ರಾಮದ ಸಮೀಕ್ಷೆಯ ಕುರಿತು ಪ್ರಶಿಕ್ಷಣಾರ್ಥಿಗಳಿಗೆ ಅಭಿವಿನ್ಯಾಸ ಕಾರ್ಯಕ್ರಮ (Socioeconomic Survey of Kowdalli Village)

ದಿನಾಂಕ 24.02.2022 ಪ್ರಥಮ ಮತ್ತು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಕೌಡಳ್ಳಿ ಗ್ರಾಮದ ಸಮೀಕ್ಷೆ ಕೈಗೊಳ್ಳುವ ಬಗ್ಗೆ ಡಾ. ಪ್ರಭುಸ್ವಾಮಿ ಎಂ ರವರು ಮಾಹಿತಿ ನೀಡಿದರು. ನಂತರ ಡಾ. ನಂಜುಂಡಪ್ಪ ಎಸ್ ರವರು ಇನ್ನಿತರ ಮುಖ್ಯ ವಿಚಾರಗಳನ್ನು ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




Tainee teachers participating in Socioeconoic status Survey of the village

## 2. ವಿಶ್ವ ಜಲ ದಿನ ಆಚರಣೆ (World Water Day)

ಸಕಲೇಶಪುರದ ಜೆಎಸ್ಎಸ್ ಬಿಎಡ್ ಕಾಲೇಜಿನಲ್ಲಿ ದಿನಾಂಕ 17-03-2022 ರಂದು ಮಧ್ಯಾಹ್ನ 3.15 ಕ್ಕೆ ವಿಶ್ವ ಜಲ ದಿನವನ್ನು ಆಚರಿಸಲಾಯಿತು. ಮುಖ್ಯ ಅಥಿತಿಗಳಾಗಿ ಶ್ರೀ ದೀಪಕ್ ಗೋ ವೇವ್ಸ್ ಸಂಸ್ಥೆ, ಬೆಂಗಳೂರು ಇವರು ಆಲ್ಕಲೈನ್ ವಾಟರ್ ನ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರು ಅಧ್ಯಕ್ಷತೆ ವಹಿಸಿದ್ದು ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



Welcoming the guest



Students participation



PRINCIPAL
J.S.S. Institute of Education
P.B.26, SAKALESHPUR-57313
Hassan Dist.

3. **ರಾಷ್ಟ್ರೀಯ ವಿಚಾರ ಸಂಕಿರಣ (National Seminar)**

ದಿನಾಂಕ 30-03-2022 ರ ಬುಧವಾರ ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ 21ನೇ ಶತಮಾನದ ಕಲಿಕಾರ್ಥಿಯ ಪ್ರತಿಭೆಯನ್ನು ಪೋಷಿಸುವಲ್ಲಿ ಶಿಕ್ಷಕರ ಶಿಕ್ಷಣದ ದೃಷ್ಟಿಕೋನ ಎಂಬ ವಿಷಯದ ಕುರಿತಂತೆ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು. ವಿಚಾರ ಸಂಕಿರಣಕ್ಕೆ ವಿವಿಧೆಡೆಯಿಂದ 198 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷರಾಗಿ ಆಗಮಿಸಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಬಿ.ಎ ರಾಜಶೇಖರ್ ಸರ್ ರವರು ಮಾತನಾಡುತ್ತಾ ವಿಚಾರ ಸಂಕಿರಣದ ಆಯೋಜನೆಯ ಉದ್ದೇಶವನ್ನು ತಿಳಿಸಿದರು. ನಮ್ಮ ಸಂಸ್ಥೆಯಲ್ಲಿ ನಡೆಯುತ್ತಿರುವ ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರನ್ನು ಆತ್ಮೀಯವಾಗಿ ಮಠದ ಹಾಗೂ ಸಂಸ್ಥೆಯ ಪರವಾಗಿ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಆಗಮಿಸಿದ ಡಾ. ನಿಂಗಮ್ಮ ಸಿ ಬೆಟ್ಸೂರು, ಡೀನ್, ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾಲಯ ಇವರು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿ ಉದ್ಘಾಟನಾ ಭಾಷಣ ನೆರವೇರಿಸಿದರು.







4. **ಸಂವಹನ ಕೌಶಲ್ಯ ಮತ್ತು ಸೂಕ್ಷ್ಮ ಬೋಧನ ಕೌಶಲ್ಯಗಳ ಕಾರ್ಯಗಾರ (Communication & Microteaching skills workshop)**

ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ದಿನಾಂಕ 18-04-2022 ರಿಂದ 07-05-2022 ರವರೆಗೆ 2022-23ನೇ ಸಾಲಿನ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಸಂವಹನ ಕೌಶಲ ಹಾಗೂ ಸೂಕ್ಷ್ಮ ಬೋಧನಾ ಕೌಶಲಗಳ ಬಗ್ಗೆ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು.





PRINCIPAL
J.S.S. Institute of Educa

5. **ನಾಟಕ ಮತ್ತು ಕಲೆ ಶಿಕ್ಷಣ ಪ್ರಾತ್ಯಕ್ಷಿಕೆ :- (Drama enacting)**

ದಿನಾಂಕ 24-05-2022 ಮತ್ತು 25-05-2022 ರಂದು ತೃತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿಗಳ ಐದು ತಂಡಗಳು ವಿವಿಧ ವಿಷಯಗಳಲ್ಲಿ ಶೈಕ್ಷಣಿಕ ನಾಟಕಗಳನ್ನು ಅಭಿನಯಿಸಿದರು. ಪ್ರದರ್ಶನ ಸಂದರ್ಭದಲ್ಲಿ ಪ್ರಶಿಕ್ಷಣಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು







6. **ನಿವೇದನಾ ಕಾರ್ಯಕ್ರಮ (ಸಮಾಜಮುಖಿ ಕಾರ್ಯಕ್ರಮ) (Special lecture on Social activities and services)**

ದಿನಾಂಕ 27-05-2022 ರಂದು **ಸೋದರಿ ನಿವೇದಿತಾ ಪ್ರತಿಷ್ಠಾನದ ವತಿಯಿಂದ ನಿವೇದನಾ ಎಂಬ ಶೀರ್ಷಿಕೆಯಡಿಯಲ್ಲಿ ಕುಮಾರಿ ಬೃಂದಾ ಮತ್ತು ಸಿರಿ ರವರು ಪ್ರಶಿಕ್ಷಣಾರ್ಥಿಗಳಿಗೆ ಸಾಮಾಜಿಕ ಚಟುವಟಿಕೆ ಮತ್ತು ಸಾಮಾಜಿಕ ಸೇವೆಗಳು ಎಂಬ ವಿಷಯದ ಬಗ್ಗೆ ಮಾತನಾಡಿದರು**. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.







PRINCIPAL
J.S.S. Institute of Education
P.B. 26, SAKALESHPUR-57313
Hassan Dist.

### 7. ವನಮಹೋತ್ಸವ ಕಾರ್ಯಕ್ರಮ (Tree Plantation)

ದಿನಾಂಕ 8-7-2022 ಶುಕ್ರವಾರ ದಂದು **ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ಸಮುಚ್ಚಯ ಕೌಡಳ್ಳಿ, ಸಕಲೇಶಪುರದಲ್ಲಿ ವನಮಹೋತ್ಸವ ಕಾರ್ಯಕ್ರಮ**ವನ್ನು ವಿವಿದ ಬಗೆಯ ಗಿಡಗಳನ್ನು ನೆಡುವುದರ ಮೂಲಕ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಕಲೇಶಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ಹೆಚ್. ಕೆ ಕುಮಾರಸ್ವಾಮಿ ಯವರು, ಶ್ರೀಮತಿ ಶಿಲ್ಪ, ಸಕಲೇಶಪುರ ವಲಯ ಅರಣ್ಯ ಅಧಿಕಾರಿಗಳು, ಶ್ರೀ ಕಾಡಪ್ಪ ನವರು ಪುರಸಭೆ ಅಧ್ಯಕ್ಷರು, ಸಕಲೇಶಪುರ, ಸ.ಬಾ ಭಾಸ್ಕರ್, ಜೆಡಿಎಸ್ ಮುಖಂಡರು, ಸಕಲೇಶಪುರ, ಶ್ರೀ ಹರೀಶ್, ತಾಲ್ಲೂಕು ಕಾರ್ಯ ನಿರ್ವಾಹಣಾ ಅಧಿಕಾರಿಗಳು ಸಕಲೇಶಪುರ, ಶ್ರೀ ತಿಮ್ಮಯ್ಯರವರು ಗ್ರಾ.ಪಂ ಅಧ್ಯಕ್ಷರು, ಆನೆಮಹಲ್ ಗ್ರಾ.ಪಂಚಾಯತಿ, ಶ್ರೀ ರೇಣುಕಾರಾಧ್ಯ, ಮುಖ್ಯಶಿಕ್ಷಕರು, ಜೆಎಸ್ಎಸ್ ಪ್ರೌಢಶಾಲೆ, ಕೌಡಳ್ಳಿ, ಶ್ರೀ ರಾಜಪ್ಪ ಪ್ರಭಾರ ಪ್ರಾಂಶುಪಾಲರು ಜೆಎಸ್ಎಸ್ ಪಿಯು ಕಾಲೇಜು, ಕೌಡಳ್ಳಿ ಸಕಲೇಶಪುರ, ಶಿಕ್ಷರುಗಳಾದ ಶ್ರೀ ಪ್ರಕಾಶ್, ಶ್ರೀ ನಂಜುಂಡಸ್ವಾಮಿ, ಶ್ರೀಮಂಜುನಾಥ, ಶ್ರೀಶಿವಕುಮಾರ್, ಶ್ರೀಮತಿ ಶ್ವೇತಾ, ಶ್ರೀಮತಿ ರಿಯಾನ, ಶ್ರೀ ಜಗದೀಶ್, ಕಛೇರಿ ಸಿಬ್ಬಂದಿ ಯವರಾದ ಶ್ರೀ ಕನಕರಾಜ, ಶ್ರೀಮತಿ ಸುಜಾತಶೆಟ್ಟಿ, ಗ್ರಂಥಪಾಲಕರಾದ ಶ್ರೀ ಡಮರೇಶ್, ಶ್ರೀ ಮಹೇಶ ಎಸ್ ಹಾಗೂ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು, ಶಾಸಕರಾದ ಶ್ರೀ ಕುಮಾರಸ್ವಾಮಿಯವರು ಮಾತನಾಡುತ್ತಾ ಜೆಎಸ್ಎಸ್ ಪ್ರೌಢಶಾಲೆಯ ಮಕ್ಕಳೊಂದಿಗೆ ವನಮಹೋತ್ಸವದ ಬಗ್ಗೆ ಸಂವಾದ ನಡೆಸುತ್ತಾ ಶಾಸಕರ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಸಮಂಜಸವಾಗಿ ನೀಡಿದ ಉತ್ತರಕ್ಕೆ ಇದಕ್ಕೆ ಮಾನ್ಯ ಶಾಸಕರು ತುಂಬ ಸಂತೋಷ ಪಟ್ಟರು..ಇದರಂತೆ ಪ್ರತಿ ವರ್ಷ ವನಮಹೋತ್ಸವ ಕಾರ್ಯಕ್ರಮದಲ್ಲಿ 100 ವಿವಿದ ಜಾತಿಯ ಸಸಿಗಳನ್ನು ನೆಡಿಸಲು ಉಪಸ್ಥಿತರಿದ್ದ ಎಲ್ಲರಿಗೂ ಶಾಸಕರು ಸೂಚಿಸಿದರು.

ಕಾರ್ಯಕ್ರಮಲ್ಲಿ ಕಾಲೇಜಿನ ಎಲ್ಲಾ ಸಿಬ್ಬಂದಿ ವರ್ಗದವರು, ಪ್ರಶಿಕ್ಷಣಾರ್ಥಿಗಳು ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳು ಹಾಜರಿದ್ದರು.







PRINCIPAL
J.S.S. Institute of Education
P.B. 26, SAKALESHPUR-573134
Hassan Dist.

8. "ವಿದ್ಯಾರ್ಥಿ ಮತ್ತು ರಾಷ್ಟ್ರೀಯತೆ" ವಿಚಾರದ ಕುರಿತಂತೆ ವಿಶೇಷ ಉಪನ್ಯಾಸ (A special lecture on Student and Nationality)


ಭಾರತ ಸ್ವಾತಂತ್ರ್ಯದ 75 ವರ್ಷಗಳ ಆಚರಣೆಯ ಆಜಾದಿ ಕಾ ಅಮೃತ ಮಹೋತ್ಸವ ಯೋಜನೆಯಡಿಯಲ್ಲಿ **ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ದಿನಾಂಕ 19-07-2022 ರಂದು ಮಧ್ಯಾಹ್ನ 2ಕ್ಕೆ "ವಿದ್ಯಾರ್ಥಿ ಮತ್ತು ರಾಷ್ಟ್ರೀಯತೆ" ವಿಚಾರದ ಕುರಿತಂತೆ ವಿಶೇಷ ಉಪನ್ಯಾಸ** ಏರ್ಪಡಿಸಲಾಗಿತ್ತು.

ಕಾರ್ಯಕ್ರಮಕ್ಕೆ ಉಪನ್ಯಾಸಕರಾಗಿ ಆಗಮಿಸಿದ **ಅಂಕಣಕಾರರು ಹಾಗೂ ಶಿಕ್ಷಕರು ಆದ ಶ್ರೀ ಡ್ಯಾನಿ ಪೆರೆರಾ** ರವರು ಮಾತನಾಡುತ್ತಾ ಸ್ವಾತಂತ್ರ್ಯ ಎನ್ನುವುದು ಕೇವಲ ಮೂರಕ್ಷರದ ನುಡಿಯಲ್ಲ ಬದಲಾಗಿ ಮೂರು ಸಾವಿರಕ್ಕೂ ಅಧಿಕ ದೇಶಭಕ್ತರ ಜೀವದಾನ, ಅಂದು ಅದೆಷ್ಟೋ ಮಂದಿ ಸ್ವಂತಿಕೆ ಬಿಟ್ಟು ಸಮಾಜಕ್ಕಾಗಿ ಬದುಕಿದರ ಪ್ರತಿಪಲವಾಗಿ ಈ ಸ್ವಾತಂತ್ರ್ಯ ಲಭಿಸಿದೆ. ಚಳುವಳಿ ಸತ್ಯಗ್ರಹಗಳ ನೇತೃತ್ವ ವಹಿಸಿದವರಷ್ಟೇ ಇಂದು ನಮ್ಮ ಕಣ್ಣಮುಂದಿರುವುದು ವಿಪರಿಹಾಸವೇ ಹೌದು. ಜೀವತೆತ್ತ ಅನೇಕರ ರಕ್ತದ ಕಲೆಯ ಮೇಲೆ ನಾವು ನೆಮ್ಮದಿಯಿಂದ ನಡೆಯುತ್ತಿದ್ದೇವೆಯೇ ಹೊರತು ವೇದಿಕೆಯ ಮೇಲೆ ನಿಂತು ಬಾಷಣ ಬಿಗಿದವರ ವರ್ಚಸ್ಸಿನಿಂದಲ್ಲ.













Specia lecture by the Chief guest

A Token of appreciation

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

ಬಹುಷಹ ಆ ನಾಯಕರ ಹಿಂದೆ ಸಾಮಾನ್ಯ ಜನತೆ ಹೆಜ್ಜೆ ಹಾಕಲಿಲ್ಲವೆಂದಿದ್ದರೆ ಸ್ವಾತಂತ್ರ್ಯವಾಗಿರುವ ಭಾರತ ಪರಾತಂತ್ರವಾಗಿಯೇ ಉಳಿದುಬಿಡುತ್ತಿತ್ತು. ಇಂತಹ ಮಹಾನ್ ವ್ಯಕ್ತಿಗಳ ಬಲಿದಾನ ಇಂದು ನಮಗೆ ನೀಡಿದ ಜೀವದಾನವೆಂಬುವುದರಲ್ಲಿ ಇನ್ನೊಂದು ಮಾತಿಲ್ಲವೆಂದು ಕೆಲ ಹೋರಾಟಗಾರರ ಕಿರು ಪರಿಚಯ ಮಾಡಿಕೊಟ್ಟರು. ನಂತರ ವಿದ್ಯಾರ್ಥಿಗಳಲ್ಲಿ ಹೇಗೆ ರಾಷ್ಟ್ರೀಯತೆಯನ್ನು ಮೂಡಿಸಬಹುದೆ ಎಂಬುದರ ಬಗ್ಗೆ ಸಂವಾದ ನಡೆಸಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ಎಸ್, ಬೋಧಕ ಬೋಧಕೇತರ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

9. **ಪ್ರಬಂಧ ಸ್ಪರ್ಧೆ -Essay Competition on Role of Women in the Indian Rebellion of 1857) ವಿಷಯ:- ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರ**

ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ದಿನಾಂಕ 23-07-2022 ರ ಶನಿವಾರ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸರಣಿ ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ "ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರ" ಎಂಬ ವಿಷಯದ ಕುರಿತಂತೆ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿತ್ತು.


ಸ್ಪರ್ಧೆಯಲ್ಲಿ ವಿಜೇತರಾದ ಕುಮಾರಿ ಸಿಂಧುರಾಣಿ ಎನ್.ಎಂ - ಪ್ರಥಮ, ಕುಮಾರಿ ಚಂದನ ಬಿ.ಎಂ – ದ್ವಿತೀಯ ಹಾಗೂ ಕುಮಾರಿ ಅಮೃತ ಎನ್.ಎಂ - ತೃತೀಯ ಬಹುಮಾನ ಪಡೆದ ಪ್ರಶಿಕ್ಷಣಾರ್ಥಿಗಳಿಗೆ ಸ್ವಾತಂತ್ರ್ಯ ದಿನಾಚರಣೆಯ ದಿನದಂದು ಬಹುಮಾನ ವಿತರಿಸಲಾಗುವುದು.










PRINCIPAL
J.S.S. Institute of Educa

**10. "ಕಾರ್ಗಿಲ್ ವಿಜಯೋತ್ಸವ" ದಿನ (Kargil Vijayotsav)**

**ದಿನಾಂಕ 26-07-2022 ರ ಮಂಗಳವಾರ ಸಕಲೇಶಪುರ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯ ದಲ್ಲಿ ಮಾನವಿಕ ಸಂಘ ಹಾಗೂ ಐಕ್ಯೂಎಸಿ ಸಹಭಾಗಿತ್ವದಲ್ಲಿ "ಕಾರ್ಗಿಲ್ ವಿಜಯೋತ್ಸವ" ದಿನ**ವನ್ನು ಆಚರಿಸಲಾಯಿತು.

ಈ ಸಂಧರ್ಭದಲ್ಲಿ **ನಿವೃತ್ತ ಸೈನಿಕರಾದ ಶ್ರೀ ಧರ್ಮಪ್ಪ** ರವರು ಆಗಮಿಸಿ ಕಾರ್ಗಿಲ್ ಯುದ್ಧದಲ್ಲಿ ಮಡಿದ ವೀರ ಯೋಧರ ತ್ಯಾಗ ಬಲಿದಾನ ವಿದ್ಯಾರ್ಥಿಗಳಿಗೆ ತಿಳಿಸಿದರು.

**ಕಾರ್ಗಿಲ್ ವಿಜಯ ದಿವಸಕ್ಕೆ 23ನೇ ವರ್ಷಾಚರಣೆ ಸಂಭ್ರಮ**. ದೇಶದ ರಕ್ಷಣೆ, ಭದ್ರತೆ, ಐಕ್ಯತೆಯನ್ನು ಎತ್ತಿಹಿಡಿದು ಕಾಪಾಡುವಲ್ಲಿ ದೇಶಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಹುತಾತ್ಮ ಯೋಧರನ್ನು ನೆನೆಯುವ ದಿನ ಇಂದು.

ಪಾಕಿಸ್ತಾನ ಸೇನೆ **1999ರಲ್ಲಿ** ಕಾರ್ಗಿಲ್-ಡ್ರಾಸ್ ವಲಯದಲ್ಲಿ ಅಕ್ರಮವಾಗಿ ಪ್ರವೇಶಿಸಿ ಭಾರತದ ಪ್ರಾಂತ್ಯಗಳನ್ನು ವಶಪಡಿಸಿಕೊಂಡಿತ್ತು. ಆಕ್ರಮಣ ಮಾಡಲು ಬಂದ ಪಾಕಿಸ್ತಾನ ಸೇನೆ ವಿರುದ್ಧ ಭಾರತೀಯ ಸೇನೆಗೆ ಯುದ್ಧ ಮಾಡದೆ ಬೇರೆ ದಾರಿಯಿರಲಿಲ್ಲ. ಆಗ ಕೇಂದ್ರ ಸರ್ಕಾರ **ಆಪರೇಷನ್ ವಿಜಯವನ್ನು ಘೋಷಿಸಿತ್ತು**. ಎರಡೂವರೆ ತಿಂಗಳ ಕಾಲ ಕಾರ್ಗಿಲ್ ನಲ್ಲಿ ಯುದ್ಧ ನಡೆದು ಕೊನೆಗೆ ಭಾರತೀಯ ಸೇನೆ ಪಾಕಿಸ್ತಾನ ಸೇನೆಯನ್ನು ಹಿಮ್ಮೆಟ್ಟುವಲ್ಲಿ ಜುಲೈ 26, 1999ರಂದು ಯಶಸ್ವಿಯಾಯಿತು. ಆ ದಿನದ ವಿಜಯವನ್ನು ಮತ್ತು ಭಾರತೀಯ ಸೈನಿಕರು ತ್ಯಾಗ, ಬಲಿದಾನಗಳನ್ನು ನೆನೆಯಲು ಪ್ರತಿವರ್ಷ ಜುಲೈ 26ನ್ನು ಕಾರ್ಗಿಲ್ ವಿಜಯ್ ದಿವಸ ಎಂದು ಆಚರಿಸಲಾಗುತ್ತದೆ.




Welcoming of the delegates




Students participation

PRINCIPAL
J.S.S. Institute of Education
P.B. 26, SAKALESHPUR-573134
Hassan Dist.




Presidential address




Honouring the guests

ಕಾರ್ಗಿಲ್ ಯುದ್ಧ ಆರಂಭವಾಗಿದ್ದು 1999ರ ಮೇ 3ರಂದು, ಕಾರ್ಗಿಲ್ ಪರ್ವತ ಶ್ರೇಣಿಯ ಮೇಲೆ ಆಕ್ರಮಣ ಮಾಡಲು ಬಂದ ಪಾಕಿಸ್ತಾನ ಸೇನೆಯನ್ನು ಹಿಮ್ಮೆಟ್ಟಲು ಭಾರತೀಯ ಸೇನೆ ದಾಳಿಗೆ ನಿಂತಿತು. ಪಾಕಿಸ್ತಾನ 1998 ರಿಂದಲೂ ದಾಳಿ ಮಾಡಲು ಹೊಂಚು ಹಾಕುತ್ತಿತ್ತು. ಆದರೆ ತಮಗೆ ಈ ಯುದ್ಧದ ಬಗ್ಗೆ ಗೊತ್ತೇ ಇರಲಿಲ್ಲ. ಭಾರತದ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರು ಹೇಳುವವರೆಗೂ ತಮಗೆ ದಾಳಿಯ ಬಗ್ಗೆ ಅರಿವಿರಲಿಲ್ಲ ಎಂದು ಅಂದಿನ ಪಾಕಿಸ್ತಾನ ಪ್ರಧಾನಿ ನವಾಜ್ ಷರೀಫ್ ಹೇಳಿಕೆ ಕೊಟ್ಟಿದ್ದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ **ಪ್ರತಿನಿಧಿ ಪ್ರಾದೇಶಿಕ ದಿನ ಪತ್ರಿಕೆಯ ವರದಿಗಾರರಾದ ಶ್ರೀ ಪ್ರದೀಪ್ ರವರು ಮಾತನಾಡುತ್ತಾ** ಕಾರ್ಗಿಲ್ ಯುದ್ಧ ಈ ಪದವೇ ಭಾರತೀಯರನ್ನು ರೋಮಾಂಚನಗೊಳಿಸುತ್ತದೆ. ಭಾರತೀಯ ಸೈನಿಕರ ಹೋರಾಟದ ಛಲ, ಶಕ್ತಿಗೆ ಸಾಕ್ಷಿಯಾದ ಯುದ್ಧವದು. ಅಲ್ಲದೆ ಪಾಕಿಸ್ತಾನ ಶಾಂತಿಯ ಮಾತಿನ ಬೆನ್ನಲ್ಲೇ ಭಾರತಕ್ಕೆ ಇರಿದ ಚೂರಿಯ ಗಾಯದ ಗುರುತೇ ಈ ಕಾರ್ಗಿಲ್. ಚಳಿಗಾಲದಲ್ಲಿ ಭಾರತದ ಪ್ರದೇಶವನ್ನು ಅಕ್ರಮಿಸಿಕೊಂಡಿದ್ದ ಪಾಕಿಸ್ತಾನಕ್ಕೆ ಭಾರತ ಗಡಿಯಲ್ಲಿ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೊಟ್ಟ ಹೊಡೆತದ ನೆನಪಿನ ದಿನವೇ ಕಾರ್ಗಿಲ್ ವಿಜಯ್ ದಿವಸ್ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ **ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ಎಸ್, ಸಂಯೋಜನಾಧಿಕಾರಿಗಳಾದ ಶ್ರೀ ಮಂಜುನಾಥ್ ಆರ್, ಸಿಬ್ಬಂದಿ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು** ಉಪಸ್ಥಿತರಿದ್ದರು.

### 11. ಕಾಲೇಜಿನ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ (Plantation program)

ಸಕಲೇಶಪುರ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ದಿನಾಂಕ 30-07-2022 ರ ಶನಿವಾರ  ಸ್ವಾತಂತ್ರ್ಯದ 75 ನೇ ವರ್ಷಾಚರಣೆಯ ಪ್ರಯುಕ್ತ ಕಾಲೇಜು ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು.

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

ಕಾರ್ಯಕ್ರಮದಲ್ಲಿ ಸಸಿ ನೆಡುವ ಮೂಲಕ ಚಾಲನೆ ನೀಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಬಿ.ಎ ರಾಜಶೇಖರ ರವರು ಮಾತನಾಡುತ್ತಾ, 75 ವರ್ಷಗಳ ಸ್ವಾತಂತ್ರ್ಯದ ಹಬ್ಬವು ಸ್ವಾತಂತ್ರ್ಯ ಹೋರಾಟದ ಸ್ಪೂರ್ತಿ ಮತ್ತು ಅದರ ತ್ಯಾಗವನ್ನು ಅನುಭವಿಸುವ ರೀತಿಯಲ್ಲಿ, ದೇಶದ ಹುತಾತ್ಮರಿಗೆ ಗೌರವ ಸಲ್ಲಿಸುವ ರೀತಿಯಲ್ಲಿ ಮತ್ತು ಅವರ ಕನಸಿನ ಭಾರತ ರೂಪಿಸುವ ನಿರ್ಧಾರ, ಅದರೊಂದಿಗೆ ಅಂದಿನ ಸಾಂಪ್ರದಾಯಿಕ ಭಾರತದ ವೈಭವವನ್ನು ಒಳಗೊಂಡ ನೋಟಗಳು ಇರಬೇಕು ಹಾಗು ಅದರಲ್ಲಿ ಆಧುನಿಕ ಭಾರತದ ಹೊಳಪೂ ಇರಬೇಕು. ಸಂತರ ಆಧ್ಯಾತ್ಮದ ಬೆಳಕು, ನಮ್ಮ ವಿಜ್ಞಾನಿಗಳ ಪ್ರತಿಭೆ ಮತ್ತು ಶಕ್ತಿಯ ಅಂಶವನ್ನೂ ಅದು ಒಳಗೊಂಡಿರಬೇಕು. ಈ ಕಾರ್ಯಕ್ರಮ ನಮಗೆ ನಮ್ಮ 75 ವರ್ಷಗಳ ಸಾಧನೆಯನ್ನು ವಿಶ್ವದೆದುರು ಮಂಡಿಸಲು ಮತ್ತು ಮುಂದಿನ 25 ವರ್ಷಗಳ ಅವಧಿಗೆ ನೀಲ ನಕಾಶೆಯನ್ನು ರೂಪಿಸಲು ಮತ್ತು ನಿರ್ಧಾರಗಳನ್ನು ಕೈಗೊಳ್ಳಲು ಒಂದು ಅವಕಾಶವಾಗಿದೆ. ನಾವು ಎಲ್ಲಿ ಇರಬೇಕು, ವಿಶ್ವದಲ್ಲಿ ನಮ್ಮ ಸ್ಥಾನ ಏನಾಗಿರಬೇಕು, 2047ರಲ್ಲಿ ಸ್ವಾತಂತ್ರ್ಯದ ಶತಮಾನೋತ್ಸವ ಆಚರಿಸುವಾಗ ನಾವು ಭಾರತವನ್ನು ಎಷ್ಟು ಎತ್ತರಕ್ಕೆ ಕೊಂಡೊಯ್ಯಬೇಕು ಎಂಬುದಕ್ಕೂ ಇದೊಂದು ಅವಕಾಶ. ಸ್ವಾತಂತ್ರ್ಯದ 75 ವರ್ಷಗಳು ಮತ್ತು ಸ್ವಾತಂತ್ರ್ಯ ಹೋರಾಟ ನಮಗೆ ಸ್ಪೂರ್ತಿಯೊದಗಿಸುತ್ತದೆ. ಸ್ವಾತಂತ್ರ್ಯದ 75 ನೇ ವರ್ಷಾಚರಣೆಯ ಈ ಹಬ್ಬ ಭಾರತದ ಸ್ವಾತಂತ್ರ್ಯದ ಶತಮಾನೋತ್ಸವಕ್ಕಾಗಿ ನಮಗೆ ಮಾರ್ಗದರ್ಶನ, ಉತ್ತೇಜನ ಮತ್ತು ಸಾಧನೆಯ ಭಾವವನ್ನು ಮೂಡಿಸಲು ವೇದಿಕೆಯೊಂದನ್ನು ತಯಾರು ಮಾಡಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗೌರ್ನಿಂಗ್ ಕೌನ್ಸಿಲ್ ಸದಸ್ಯರು ಹಾಗೂ ಸಕಲೇಶಪುರ ಕಾಫಿ ಬೆಳೆಗಾರರಾದ ಶ್ರೀ ಬಿ.ಡಿ ಬಸವಣ್ಣರವರು, ಗೌರ್ನಿಂಗ್ ಕೌನ್ಸಿಲ್ ಸದಸ್ಯರು ಹಾಗೂ ಹಾಸನ ಹೇಮ ಗಂಗೋತ್ರಿಯ ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ. ಮಹದೇವಪ್ಪ, ಪ್ರಾಂಶುಪಾಲರಾದ ಡಾ. ನಂಜುಂಡಪ್ಪ, ಸಂಯೋಜನಾಧಿಕಾರಿಗಳಾದ ಶ್ರೀ ಮಂಜುನಾಥ್ ಆರ್, ನ್ಯಾಕ್ ಸಂಯೋಜನಾಧಿಕಾರಿಗಳಾದ ಡಾ. ದಿನೇಶ್ ಎಂ.ಕೆ, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕಾಳೇಗೌಡ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.









PRINCIPAL
J.S.S. Institute of Education
P.B.26, SAKALESHPUR-573134




Plantation in the campus

## 12. ಕಿರುನಾಟಕ ಪ್ರದರ್ಶನ (Drama exhibition)

ಸಕಲೇಶಪುರ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ದಿನಾಂಕ 11-08-2022 ರ ಗುರುವಾರ ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಪ್ರಶಿಕ್ಷಣಾರ್ಥಿಗಳಲ್ಲಿ ದೇಶಭಕ್ತಿ ಮೂಡಿಸುವಂತಹ "ಸ್ವಾತಂತ್ರ್ಯ ಸಂಗ್ರಾಮ" ಎಂಬ ಶೀರ್ಷಿಕೆಯಡಿಯಲ್ಲಿ ಕಿರುನಾಟಕ ಪ್ರದರ್ಶನ ಮಾಡಲಾಯಿತು. ಪ್ರಶಿಕ್ಷಣಾರ್ಥಿಗಳು ನಾಟಕ ಪ್ರದರ್ಶಿಸಿದರು.




Enacting the Drama

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

## 13. ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತಿ ಮಹೋತ್ಸವ (Founder's Day)




ರೋಟರಿ ಶ್ರೀ ಎನ್.ಕೆ. ಗಣಪಯ್ಯ ವಾಕ್-ಶ್ರವಣ ದೋಷವುಳ್ಳ ಮಕ್ಕಳ ಶಾಲೆಯ ವಿದ್ಯಾರ್ಥಿಗಳಿಗೆ ಹಣ್ಣು ಹಂಪಲು ವಿತರಣೆ

ಪೂಜ್ಯ ಶ್ರೀಗಳ ಜಯಂತಿ ಮಹೋತ್ಸವದ ಅಂಗವಾಗಿ ದಿನಾಂಕ: 15-09-2022ರ ಬೆಳಗ್ಗೆ 8-00 ಗಂಟೆಗೆ ಸಕಲೇಶಪುರದ ಕೌಡಳ್ಳಿಯಲ್ಲಿರುವ ವಾಕ್-ಶ್ರವಣ ದೋಷವುಳ್ಳ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ 70 ವಿದ್ಯಾರ್ಥಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು. ಕಾಫಿಬೆಳೆಗಾರರಾದ ಶ್ರೀ ನಟರಾಜು ಸೀಗೂರು, ಶ್ರೀ ವೈ.ಎಸ್. ಗಿರೀಶ್, ಶ್ರೀ ಗಣಪಯ್ಯ ವಾಕ್-ಶ್ರವಣ ದೋಷವುಳ್ಳ ಮಕ್ಕಳ ಶಾಲೆಯ ಅಧ್ಯಕ್ಷರಾದ ರೊ. ಶ್ರೀ.ಎನ್. ರಜಿನಿಕಾಂತ್ ಹಾಗೂ ರೋಟರಿ ಸಂಸ್ಥೆಯ ಪದಾಧಿಕಾರಿಗಳು, ಸಕಲೇಶಪುರ ವೀರಶೈವ ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಎ.ವಿ. ನರೇಶ್, ಜೆಎಸ್ಎಸ್ ಶಿಕ್ಷಣ ಸಂಸ್ಥೆಯ ಸಿಬ್ಬಂದಿವರ್ಗದವರು ಹಾಜರಿದ್ದು, ಪೂಜ್ಯ ಶ್ರೀಗಳ ಸಾಧನೆಯನ್ನು ಸ್ಮರಿಸಲಾಯಿತು. ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಈಶ್ವರಪ್ಪನವರು ಸಂಜ್ಞೆಯ (ಕೈಸನ್ನೆ ಮಾಡಿ) ಭಾಷೆಯನ್ನು ಬಳಸಿ ಕಾರ್ಯಕ್ರಮದ ಉದ್ದೇಶಗಳು ಸುತ್ತೂರು ಶ್ರೀ ಮಠದ ಕಾಲೇಜಿನ ಕಾರ್ಯಕ್ರಮಗಳ ಬಗ್ಗೆ ಪರಿಚಯಿಸಿದರು. ಇಲ್ಲಿ ವಿದ್ಯಾಭ್ಯಾಸ ಮುಗಿಸಿ ನಂತರ ಮೈಸೂರಿನಲ್ಲಿಯ ಜೆಎಸ್ಎಸ್ ವಿಶೇಷ ಚೇತನ ಮಕ್ಕಳಿಗೆ ಸ್ಥಾಪಿಸಿದ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನೀವು ವಿದ್ಯಾಭ್ಯಾಸ ಮುಂದುವರೆಸಬಹುದು ಎಂದು ತಿಳಿಸಿದರು.

➢ **ಕ್ರಾಫರ್ಡ್ ಆಸ್ಪತ್ರೆಯ ಒಳ ರೋಗಿಗಳಿಗೆ ಹಣ್ಣು ಹಂಪಲುಗಳ ವಿತರಣೆ :**



ಬೆಳಗ್ಗೆ 8-30 ಗಂಟೆಗೆ ಶ್ರೀಗಳವರ ಜಯಂತಿ ಮಹೋತ್ಸವದ ಅಂಗವಾಗಿ ಸಕಲೇಶಪುರದ ಕ್ರಾಫರ್ಡ್ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣುಹಂಪಲುಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಡಾ.ಎ.ಬಿ. ಅರುಣ್ ಕುಮಾರ್,



PRINCIPAL
J.S.S. Institute of Education
P.B.26, SAKALESHPUR-573134

ವೈದ್ಯಾಧಿಕಾರಿಗಳು, ಶ್ರೀ ವಿದ್ಯಾಶಂಕರ್, ಕಾರ್ಯದರ್ಶಿಗಳು, ಶ್ರೀ ಗುರುವೇಗೌಡ ಕಲ್ಯಾಣಮಂಟಪ ಅಭಿವೃದ್ಧಿ ಸಮಿತಿ, ಶ್ರೀಮತಿ ರೇಖಾ ಸುರೇಶ್, ಅಧ್ಯಕ್ಷರು, ಅಕ್ಕಮಹಾದೇವಿ ಮಹಿಳಾ ವೇದಿಕೆ, ಸಕಲೇಶಪುರ, ರೊ. ಶ್ರೀ ಶಶಿಧರ್, ಅಧ್ಯಕ್ಷರು, ರೋಟರಿ ಸಂಸ್ಥೆ, ಶ್ರೀ ಪರಮೇಶ್, ಕಾರ್ಯದರ್ಶಿಗಳು, ರೋಟರಿ ಸಂಸ್ಥೆ, ಸಕಲೇಶಪುರ, ಶ್ರೀ ಬಿ.ಜಿ. ಯತೀಶ್, ಅಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾ, ಸಕಲೇಶಪುರ ತಾಲ್ಲೂಕು ಘಟಕ, ಜೆಎಸ್‌ಎಸ್ ಸಂಸ್ಥೆಗಳ ಸಿಬ್ಬಂದಿವರ್ಗ, ಆಸ್ಪತ್ರೆಯ ಸಿಬ್ಬಂದಿವರ್ಗ ಮತ್ತು ಸಮಾಜದ ಗಣ್ಯರು ಹಾಜರಿದ್ದು, ಪೂಜ್ಯ ಶ್ರೀಗಳನ್ನು ಸ್ಮರಿಸಲಾಯಿತು.

➢ **<u>ಪೂಜ್ಯ ಶ್ರೀಗಳವರ ಭಾವಚಿತ್ರ ಮೆರವಣಿಗೆ :-</u>**



ಬೆಳಗ್ಗೆ 9-00 ಗಂಟೆಗೆ ಶ್ರೀ ಗಣಪತಿ, ಶ್ರೀ ಸಕಲೇಶ್ವರ ಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿ ದೇವರಿಗೆ ವಿಶೇಷ ಪೂಜೆಯನ್ನು ಸಲ್ಲಿಸಿದ ನಂತರ ಸಕಲೇಶಪುರ ಪುರಸಭೆಯ ಅಧ್ಯಕ್ಷರಾದ ಶ್ರೀ ಕಾಡಪ್ಪರವರು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರ ಮೆರವಣಿಗೆಯನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಲೆನಾಡು ವೀರಶೈವ ಸಮಾಜದ ಮುಖಂಡರುಗಳು, ವಿವಿಧ ಸಂಘಗಳ ಪದಾಧಿಕಾರಿಗಳು, ಶ್ರೀ ಮಠದ ಭಕ್ತರು ಮತ್ತು ಜೆಎಸ್‌ಎಸ್ ಸಂಸ್ಥೆಗಳ ನೌಕರರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

➢ **ಪೂಜ್ಯ ಶ್ರೀಗಳವರ 107ನೆಯ ಜಯಂತಿ ಮಹೋತ್ಸವದ ಸಭಾ ಕಾರ್ಯಕ್ರಮ.**




ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತಿ ಮಹೋತ್ಸವದ ಉದ್ಘಾಟನಾ ಸಮಾರಂಭವನ್ನು ಸಕಲೇಶಪುರದ ಶ್ರೀ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿತ್ತು.

ದಿನಾಂಕ: 15-09-2022ರಂದು ಬೆಳಿಗ್ಗೆ 10-30 ಕ್ಕೆ ಸಭಾ ಕಾರ್ಯಕ್ರಮವು ಬಾಗೆ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಶಿಕ್ಷಕರಾದ ಶ್ರೀ ಪ್ರಕಾಶ್ ಇವರು ಶ್ರೀ ಮಠದ ಗುರುಪರಂಪರೆಗೆ ನಮನ ಸಲ್ಲಿಸುತ್ತಾ ನಿರೂಪಣೆ



PRINCIPAL
J.S.S. Institute of Education
P.B. 26, SAKALESHPUR-573134
Hassan Dist.

ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಬಾಗೆ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಶಿಕ್ಷಕರಾದ ಶ್ರೀಮತಿ ಪೂರ್ಣಿಮ-ರವರು ಪ್ರಾರ್ಥನೆ ಮಾಡಿದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಮಂಜುನಾಥ ಆರ್. ರವರು ಪೂಜ್ಯ ಶ್ರೀಗಳವರು ನಡೆದು ಬಂದ ಹಾದಿಯನ್ನು ಸಂಕ್ಷಿಪ್ತವಾಗಿ ಪರಿಚಯಿಸಿ, ಪ್ರಾಸ್ತವಿಕವಾಗಿ ಮಾತನಾಡಿ ಸಮಾರಂಭದಲ್ಲಿ ಹಾಜರಿದ್ದ ಪೂಜ್ಯರನ್ನು, ಅತಿಥಿ ಗಣ್ಯರನ್ನು, ಶ್ರೀ ಮಠದ ಭಕ್ತರನ್ನು, ಪೋಷಕರನ್ನು, ವಿದ್ಯಾರ್ಥಿಗಳನ್ನು ಹಾಗೂ ಮಾಧ್ಯಮದವರನ್ನು ಸ್ವಾಗತಿಸಿದರು.

**ಉದ್ಘಾಟನೆ :-**





ಸಮಾರಂಭದಲ್ಲಿ ಉಪಸ್ಥಿತರಿದ್ದ ಪೂಜ್ಯ ಶ್ರೀಗಳು, ಅತಿಥಿ ಗಣ್ಯರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟನೆಯನ್ನು ನೆರವೇರಿಸಿ, ಪೂಜ್ಯ ಶ್ರೀಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಅರ್ಪಿಸಿದರು.

**ಉದ್ಘಾಟನಾ ಭಾಷಣ :-**



ಮುಖ್ಯ ಅತಿಥಿಗಳಾಗಿ ಆಗಮಿಸಿ, ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ಬೆಂಗಳೂರು ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿಯ ಸದಸ್ಯರಾದ ಶ್ರೀ ಸಿದ್ಧೇಶ್ ನಾಗೇಂದ್ರರವರು ಪೂಜ್ಯ ಶ್ರೀಗಳವರು ಸಮಾಜಕ್ಕೆ ನೀಡಿರುವ ಕೊಡುಗೆಗಳು ಹಾಗೂ ವಿದ್ಯಾಭ್ಯಾಸಕ್ಕೆ ನೀಡಿರುವ ಮಹತ್ವದ ಬಗ್ಗೆ ವಿವರಿಸಿದರು. ಶ್ರೀ ಸುತ್ತೂರು ಮಠ ಹಾಗೂ ಶ್ರೀ ಸಿದ್ಧಗಂಗಾ ಮಠ ನಮಗೆ ಎರಡು ಕಣ್ಣುಗಳಿದ್ದಂತೆ ಎಂದು ಭಾವುಕರಾಗಿ ನುಡಿಯುತ್ತ ಎಲ್ಲರ ಗಮನವನ್ನು ಸೆಳೆದರು. ಯಾವುದೇ ಪ್ರತಿಫಲಾಪೇಕ್ಷೆ ನಿರೀಕ್ಷಿಸದೆ ಹಸಿದು ಬಂದವರಿಗೆ ಅನ್ನ, ವಿದ್ಯೆ, ಆರೋಗ್ಯವನ್ನು ಮಾತೃ ವಾತ್ಸಲ್ಯದ ಮೂಲಕ ನೀಡುತ್ತಿದ್ದವರು ಶ್ರೀಗಳು. ಮಹಾಪುರುಷರು



PRINCIPAL
J.S.S. Institute of Education
P.B. 26, SAKALESHPUR-573134

ಇಂದು ದೈಹಿಕವಾಗಿ ನಮ್ಮ ಜೊತೆ ಇಲ್ಲದಿದ್ದರು ಮಾನಸಿಕವಾಗಿ ಮತ್ತೊಬ್ಬರಲ್ಲಿ ಇರುತ್ತಾರಂತೆ. ಹಾಗೆಯೇ ರಾಜೇಂದ್ರ ಶ್ರೀಗಳು ಪೂಜ್ಯ ದೇಶೀಕೇಂದ್ರ ಶ್ರೀಗಳವರ ಜೊತೆ ಸೇರಿ ನಾಡಿನಾದ್ಯಂತ ಅಕ್ಷರ ದಾಸೋಹವನ್ನು ದಯಪಾಲಿಸುತ್ತಿದ್ದಾರೆ. ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ಸುತ್ತೂರು ಶ್ರೀಗಳವರ ಸೇವೆ ಅನನ್ಯವಾದದ್ದು. ಅದಕ್ಕೆ ನಾವೆಲ್ಲ ಚಿರಋಣಿಯಾಗಿರಬೇಕು ಎಂದು ಹೇಳಿದರು.

- **ಪ್ರತಿಜ್ಞಾ ವಿಧಿ ಸ್ವೀಕಾರ :-**



ಪೂಜ್ಯ ಶ್ರೀಗಳವರ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು ಹಾಗೂ ಕಲಿಯುತ್ತಿರುವ ವಿದ್ಯಾರ್ಥಿಗಳು ಪರಮಪೂಜ್ಯ ಲಿಂಗೈಕ್ಯ ಜಗದ್ಗುರುಗಳವರ ಆಶಯದಂತೆ, ಸತ್ಯ, ಪ್ರಾಮಾಣಿಕ, ಸುಸಂಸ್ಕೃತವಾಗಿ ಗುರುಹಿರಿಯರನ್ನು ಗೌರವಿಸುತ್ತೇವೆ ಎಂದು ಜೆಎಸ್‌ಎಸ್ ಬಿ.ಎಡ್. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕಾಳೇಗೌಡರ ಮಾರ್ಗದರ್ಶನದಂತೆ ಪ್ರತಿಜ್ಞೆಯನ್ನು ಮಾಡಿದರು.


- **ಕರಪತ್ರ ಬಿಡುಗಡೆ :-**



ಸಮಾರಂಭದಲ್ಲಿ ಯಡಹಳ್ಳಿ ಆರ್. ಮಂಜುನಾಥ್ ರವರು ಪೂಜ್ಯ ಶ್ರೀ ರಾಜೇಂದ್ರ ಸ್ವಾಮಿಗಳವರ ಸಾಧನೆಯ ಬಗ್ಗೆ ಭಾವಚಿತ್ರಗಳನ್ನೊಳಗೊಂಡಿದ್ದ ಕರ-ಪತ್ರವನ್ನು ಹರಗುರುಚರಮೂರ್ತಿಗಳು ಮತ್ತು ಗಣ್ಯರಿಂದ ಬಿಡುಗಡೆ ಮಾಡಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಭಕ್ತರಿಗೆ ವಿತರಿಸಲಾಯಿತು.

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

- **ಪೂಜ್ಯ ಶ್ರೀಗಳವರನ್ನು ಕುರಿತು ಗೀತಗಾಯನ :-**




ಸಮಾರಂಭದಲ್ಲಿ ಪೂಜ್ಯ ಶ್ರೀಗಳವರನ್ನು ಕುರಿತು "ಆರತಿ ಎತ್ತಿರೆ ಬಾಲೆಯರೆಲ್ಲರು, ಅರಿವಿನ ಗುರು ಶ್ರೀ ಶಿವರಾತ್ರಿ ರಾಜೇಂದ್ರರಿಗೆ" ಎಂದು ಸುಮಧುರವಾಗಿ ಗೀತಗಾಯನವನ್ನು ಬಾಗೆ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಶಿಕ್ಷಕ ವೃಂದದವರು ನಡೆಸಿಕೊಟ್ಟರು.

- **ಮುಖ್ಯ ಅತಿಥಿಗಳ ಭಾಷಣ :-**



ಮುಖ್ಯ ಅತಿಥಿಗಳಾದ ಆಲೂರು ಶ್ರೀ ವೀರಶೈವ ಲಿಂಗಾಯತ ಸಂಘದ ಅಧ್ಯಕ್ಷರಾಗಿರುವ ಶ್ರೀ.ಬಿ. ರೇಣುಕಪ್ರಸಾದ್‌ರವರು ಶಿಕ್ಷಣ ಎಂಬುದು ತಮ್ಮ ತಮ್ಮ ಸ್ವಾರ್ಥವನ್ನು ನೋಡಿಕೊಳ್ಳುವುದಕ್ಕಲ್ಲ. ಇದು ನಿಸ್ವಾರ್ಥವನ್ನು ಬೆಳೆಸುವುದಾಗಿದೆ. ಈ ನಿಸ್ವಾರ್ಥ ಜೀವನವನ್ನು ಶ್ರೀಗಳವರು ನಡೆಸಿದರು. ಅವರ ದೃಷ್ಟಿಕೋನ ವೈಯಕ್ತಿಕವಾಗಿರದೆ, ಸಮಾಜಮುಖಿಯಾಗಿತ್ತು. ಗ್ರಾಮಾಂತರ ಬಡವಿದ್ಯಾರ್ಥಿಗಳಿಗಾಗಿ ತಮ್ಮ ಜೀವನ ತ್ಯಾಗ ಮಾಡಿ ಉಚಿತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ, ನಂತರ ಪ್ರಾಥಮಿಕ ಹಂತದಿಂದ ಹಿಡಿದು ತಾಂತ್ರಿಕ ಆರೋಗ್ಯ ಶಿಕ್ಷಣವನ್ನು ನೀಡಿದರು. ಹಾಗೆಯೇ, ದಯವೇ ಧರ್ಮದ ಮೂಲವಯ್ಯ ಎಂಬ ತತ್ವವನ್ನು ತಮ್ಮ ಬದುಕಿನಲ್ಲಿ ಶ್ರೀಗಳವರು ಅಳವಡಿಸಿಕೊಂಡಿದ್ದರು. ಮಠಗಳನ್ನು ಕಟ್ಟುವುದು ಸುಲಭವಲ್ಲ ನಿರ್ವಹಿಸುವುದು ಬಹಳ ಕಷ್ಟ ಎಂದು ತಿಳಿಸಿದರು ಹಾಗೂ ಮಠಗಳಿಗೆ ನಮ್ಮಿಂದಾಗುವಷ್ಟು ಎಲ್ಲರೂ ಸಹಾಯ ಮಾಡಬೇಕೆಂದು ಕೇಳಿಕೊಂಡರು.

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

* **ಅಧ್ಯಕ್ಷರ ಭಾಷಣ :-**



ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ, ಶ್ರೀ ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷರಾಗಿರುವ ಶ್ರೀ ಎಚ್.ಎನ್.ದೇವರಾಜು (ದಿವಾನ್) ರವರು ಮಾತನಾಡುತ್ತಾ, ಸುತ್ತೂರು ಮಠದ ಶ್ರೀಗಳು ಮತ್ತು ಅವರ ನಡುವೆ ಹೇಗೆ ಸಂಬಂಧ ಬೆಳೆದು ಬಂತು ಎಂಬುದರ ಬಗ್ಗೆ ವಿವರವಾಗಿ ತಿಳಿಸುತ್ತಾ, ಶ್ರೀ ಮಠದ ಸಾಮಾಜಿಕ ಸೇವೆಯನ್ನು ಉದಾಹರಣೆ ಸಹಿತ ಪರಿಚಯಿಸಿದರು. ಪ್ರಸ್ತುತ ಜಗದ್ಗುರುಗಳವರು ಯಾವುದೇ ಪ್ರಚಾರವನ್ನು ಅಪೇಕ್ಷಿಸದೆ ನಾಡಿನ ಉದ್ಧಾರಕ್ಕಾಗಿ ತಮ್ಮನ್ನೇ ತಾವೇ ಅರ್ಪಿಸಿಕೊಂಡಿದ್ದಾರೆ ಎಂದರು. ಮಲೆನಾಡಿನಲ್ಲಿ ಸಂಸ್ಥೆಗಳನ್ನು ಸ್ಥಾಪಿಸಿ, ಈ ಭಾಗದ ಮಕ್ಕಳಿಗೆ ಉತ್ತಮ ನೈತಿಕ ಶಿಕ್ಷಣ ನೀಡುತ್ತಿರುವುದು ಸ್ಮರಣೀಯ. ಅದಕ್ಕಾಗಿ ನಾವೆಲ್ಲರೂ ಋಣಿಯಾಗಿರಬೇಕು ಹಾಗೂ ಇಂತಹ ಪುಣ್ಯಾತ್ಮರನ್ನು ನೆನಪಿಸಿಕೊಳ್ಳಲು ಜಯಂತಿ ಮಹೋತ್ಸವದಲ್ಲಿ ಅವಕಾಶ ಸಿಕ್ಕಿರುವುದು ನಮ್ಮ ಪೂರ್ವಜನ್ಮದ ಪುಣ್ಯದ ಫಲ ಎಂದು ಹೇಳಿ, ಭಾಗವಹಿಸಿದ ಅತಿಥಿಗಳಿಗೆ, ಪ್ರತಿಭಾ ಪುರಸ್ಕಾರ ಪಡೆದ ವಿದ್ಯಾರ್ಥಿಗಳಿಗೆ ಶುಭ ಕೋರಿದರು.

* **ಆಶೀರ್ವಚನ :-**



ಹಾಸನ ತಣ್ಣೀರುಹಳ್ಳ ಮಠದ ಮಠಾಧ್ಯಕ್ಷರು ಆಗಿರುವ ಪೂಜ್ಯ ಶ್ರೀ ವಿಜಯಕುಮಾರ ಸ್ವಾಮಿಗಳು ಆಶೀರ್ವಚನ ದಯಪಾಲಿಸುತ್ತಾ ಪೂಜ್ಯ ಶ್ರೀ ರಾಜೇಂದ್ರ ಸ್ವಾಮಿಗಳು ಮತ್ತು ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳು ಭಾರತದ ದಕ್ಷಿಣ ಭಾಗದ ಎರಡು ಕಣ್ಣುಗಳಿದ್ದಂತೆ ಎಂದು ಹೇಳುತ್ತಾ, ಶ್ರೀ ರಾಜೇಂದ್ರ ಶ್ರೀಗಳವರ ಕಾರ್ಯ ವೈಖರಿಯನ್ನು ಮನಮುಟ್ಟುವಂತೆ ತಿಳಿಸಿದರು. ಪೂಜ್ಯ ಶ್ರೀ ರಾಜೇಂದ್ರ ಸ್ವಾಮಿಗಳಿಂದ ಆರಂಭವಾದ



PRINCIPAL
J.S.S. Institute of Education
P.B. 26, SAKALESHPUR-573134

ಮಹಾತ್ಕಾರ್ಯಗಳ ಬಗ್ಗೆ ವಿವರವಾಗಿ ತಿಳಿಸಿದರು. ಮೈಸೂರಿಗೆ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಅವರು ಪಟ್ಟ ಪರಿಶ್ರಮವನ್ನು ಸ್ಮರಿಸಿಕೊಂಡರು. ಅನೇಕ ವಚನಗಳ ಮೂಲಕ ಶರಣರ ಕಾಯಕ ತತ್ವವನ್ನು ವಿವರಿಸಿದರು. ಪೂಜ್ಯ ರಾಜೇಂದ್ರ ಶ್ರೀಗಳು ಸ್ವಾರ್ಥಕ್ಕಾಗಿ ಜೀವನವನ್ನು ನಡೆಸುತ್ತಿರಲಿಲ್ಲ. ಸಮಾಜಕ್ಕಾಗಿ ದುಡಿಮೆ ಮಾಡಿದವರು ಎಂದು ತಿಳಿಸಿದರು. ಈ ರೀತಿಯ ಜಯಂತಿ ಕಾರ್ಯಕ್ರಮಗಳು ನಮ್ಮ ಜೀವನದಲ್ಲಿ ಉನ್ನತ ಮಾರ್ಗ ಪಡೆಯಲು ಅವಶ್ಯಕ. ಶ್ರೀಗಳವರು ಸರ್ವವನ್ನು ತ್ಯಾಗ ಮಾಡಿ ಸರ್ವರ ಏಳಿಗೆಗಾಗಿ ದುಡಿದಿದ್ದಾರೆ ಎಂದು ಹೇಳಿದರು.

ಪೂಜ್ಯ ಶ್ರೀಗಳು ಸ್ಥಾಪಿಸಿದ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ನಿಮ್ಮಂತಹ ವಿದ್ಯಾರ್ಥಿಗಳೇ ಪುಣ್ಯವಂತರು. ನೀವು ಪಡೆಯುತ್ತಿರುವ ಸಾಮಾನ್ಯ ಶಿಕ್ಷಣದ ಜೊತೆಗೆ ಶರಣರ ಜೀವನವನ್ನು ಅಧ್ಯಯನ ಮಾಡಿ, ನಿಮ್ಮ ಜೀವನ ಉತ್ತಮವಾಗಿ ರೂಪುಗೊಳ್ಳುತ್ತದೆ ಎಂದರು. ನಮ್ಮ ರಾಜ್ಯದಲ್ಲಿ ಮಠ ಮಾನ್ಯಗಳು ಶಿಕ್ಷಣ ಕ್ರಾಂತಿಯನ್ನೇ ಮಾಡಿದ್ದಾರೆ ಎಂದು ತಿಳಿಸಿದರು. ಶಿಕ್ಷಣ ಕ್ಷೇತ್ರಕ್ಕೆ ಸುತ್ತೂರು ಶ್ರೀ ಮಠದ ಕೊಡುಗೆ ಅಪಾರವಾದದ್ದು ಎಂದು ತಿಳಿಸಿದರು.

ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಅಭಿನಂದಿಸಿದರು. ಕಾರ್ಯಕ್ರಮವು ಉತ್ತಮವಾಗಿ ನೆರವೇರಿದೆ ಎಂದು ಪ್ರಶಂಸಿಸಿ ಆಶೀರ್ವಚನ ನೀಡಿದರು.

- **ವಂದನಾರ್ಪಣೆ :-**

ಸಮಾರಂಭ ಬೆಳಿಗ್ಗೆ 10–30 ಕ್ಕೆ ಪ್ರಾರಂಭವಾಗಿ ಅಪರಾಹ್ನ 2 ಗಂಟೆಗೆ ಮುಕ್ತಾಯವಾಯಿತು. ಈ ಸಂದರ್ಭದಲ್ಲಿ ಪೂಜ್ಯ ಶ್ರೀಗಳವರಿಗೆ, ಅತಿಥಿಗಣ್ಯರಿಗೆ, ಆಹ್ವಾನಿತರಿಗೆ, ಪತ್ರಕರ್ತರಿಗೆ, ಪೋಷಕರಿಗೆ, ಶ್ರೀ ಮಠದ ಭಕ್ತರಿಗೆ ವಿದ್ಯಾರ್ಥಿಗಳಿಗೆ ಸಕಲೇಶಪುರದ ಜೆಎಸ್‌ಎಸ್ ಸ್ವತಂತ್ರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಶಿವಕುಮಾರ್ ಆರ್.ಎಂ. ಇವರು ವಂದನೆಗಳನ್ನು ಸಲ್ಲಿಸಿದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಪರವಾಗಿ ಸಮಾರಂಭದಲ್ಲಿ ಭಾಗವಹಿಸಿದ ಪೂಜ್ಯರಿಗೆ ನೆನಪಿನ ಕಾಣಿಕೆ, ಫಲಪುಷ್ಪ ನೀಡಿ ಭಕ್ತಿ ಸಮರ್ಪಣೆ, ಅತಿಥಿಗಣ್ಯರಿಗೆ ಗೌರವ ಸಮರ್ಪಣೆಯನ್ನು ಮಾಡಲಾಯಿತು.

## 14. ವಿಶೇಷ ಯೋಗ ಶಿಬಿರ (Yoga Camp)


ದಿನಾಂಕ 10-10-2022 ರಿಂದ 14-10-2022 ರವರೆಗೆ ನಮ್ಮ ಕಾಲೇಜಿನ ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿಗಳಿಗೆ ವಿಶೇಷ ಯೋಗ ಶಿಬಿರವನ್ನು ಪ್ರತಿದಿನ ಮಧ್ಯಾಹ್ನ 3.00 ರಿಂದ 5.30 ರವರೆಗೆ ಹಮ್ಮಿಕೊಳ್ಳಲಾಗಿತ್ತು.







PRINCIPAL
J.S.S. Institute of Education
P.B. 26, SAKALESHPUR-573134
Hassan Dist


## 15. ಸಮುದಾಯ ವಾಸ್ತವ್ಯ ಶಿಬಿರ (Community Living Camp-CLC)

ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ 2021-22ನೇ ಸಾಲಿನ ನಾಲ್ಕನೇ ಸೆಮಿಸ್ಟರ್ ಪ್ರಶಿಕ್ಷಣಾರ್ಥಿಗಳಿಗೆ ಸಮುದಾಯ ವಾಸ್ತವ್ಯ ಶಿಬಿರವನ್ನು ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ನಾರ್ವೆ ಗ್ರಾಮದಲ್ಲಿ 13, 14 ಮತ್ತು 15ನೇ ಅಕ್ಟೋಬರ್ 2022 ರಂದು ಮೂರು ದಿನಗಳು ನಡೆಸಲಾಯಿತು.

**ಶಿಬಿರದ ಮೊದಲ ದಿನ:-**

**ಧ್ವಜಾರೋಹಣ:**

ದಿನಾಂಕ 13 ಅಕ್ಟೋಬರ್ 2022 ರ ಬುಧವಾರ ಬೆಳಗ್ಗೆ 11 ಗಂಟೆಗೆ ಶಿಬಿರ ಸ್ಥಾನದಲ್ಲಿ ನಾರ್ವೆ ಜೆಎಸ್ಎಸ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸುರೇಶ್ ಪಿ, ಶಿಬಿರಾಧಿಕಾರಿಗಳಾದ ಶ್ರೀ ನಂಜುಂಡಪ್ಪ ಎಸ್ ಹಾಗೂ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕಾಳೇಗೌಡ ರವರು ಶಿಬಿರಾರ್ಥಿಗಳ ಸಮ್ಮುಖದಲ್ಲಿ ಶಿಬಿರದ ಧ್ವಜಾರೋಹಣ ಕಾರ್ಯಕ್ರಮವನ್ನು ನಡೆಸಿದರು.



PRINCIPAL
J.S.S. Institute of Education
P.B. 26, SAKALESHPUR-573134
Hassan Dist.

**ಶಿಬಿರದ ಉದ್ಘಾಟನೆ:**

ಸಮಯ ಮಧ್ಯಾಹ್ನ 12ಕ್ಕೆ ಶಿಬಿರದ ಉದ್ಘಾಟನೆಯನ್ನು ನಾರ್ವೆ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಬೇಬಿ ಪ್ರಕಾಶ್ ರವರು ಉದ್ಘಾಟಿಸಿದರು. ಶಿಬಿರದ ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ನಾರ್ವೆ ಗ್ರಾಮ ಪಂಚಾಯತಿ ಉಪಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ರವರು ಆಗಮಿಸಿದರು. ಶಿಬಿರಾಧಿಕಾರಿಗಳಾದ ಶ್ರೀ ನಂಜುಂಡಸ್ವಾಮಿ ಕೆ.ಎಸ್ ರವರು ಶಿಬಿರದ ಕುರಿತಂತೆ ಪ್ರಾಸ್ತಾವಿಕ ನುಡಿಗಳನ್ನಾಡಿದರು.


ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಶ್ರೀ ಡ್ಯಾನಿ ಪೆರೇರಾ ರವರು ಸಮುದಾಯದೊಂದಿಗೆ ಶಿಕ್ಷಕರು ಹೇಗೆ ಸೇವಾ ಕಾರ್ಯಕ್ರಮದಲ್ಲಿ ಜೋಡಿಸಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ಎಸ್, ಜೆಎಸ್ಎಸ್ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಸುರೇಶ್ ಪಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕಾಳೇಗೌಡ, ಪ್ರಾಧ್ಯಾಪಕರಾದ ಡಾ. ಪ್ರಭುಸ್ವಾಮಿ, ಬೋಧಕ ಮತ್ತು ಬೋಧಕರ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.









PRINCIPAL
J.S.S. Institute of Education
P.B. 26, SAKALESHPUR-573134
Hassan Dist.

**ಭೋಜನ ಸಂದರ್ಭ:**

ಮಧ್ಯಾಹ್ನ 2ಕ್ಕೆ ಸಾಮೂಹಿಕ ಭೋಜನ ಅನ್ನಪೂರ್ಣೇ ಸದಾಪೂರ್ಣೇ... ಬ್ರಹ್ಮಾರ್ಪಣಂ ಬ್ರಹ್ಮಹವಿಃ.... ಹಾಗೂ ಓಂ ಸಹನಾವವತು ... ಓಂ ಶಾಂತಿಃ ಶಾಂತಿಃ ಶಾಂತಿಃ ಎಂಬ ಭೋಜನಾ ಮಂತ್ರದೊಂದಿಗೆ ನಡೆಯಿತು. ನಿತ್ಯದ ಎಲ್ಲಾ ಸಮಯದ ಭೋಜನಾ ಸಂದರ್ಭದಲ್ಲೂ ಈ ಮಂತ್ರ ಪಠಿಸುವ ಸಂದರ್ಭದಲ್ಲಿ ಶಿಬಿರಾರ್ಥಿಗಳು ಕಣ್ಣುಮುಚ್ಚಿ ಪಠಿಸುತ್ತಿದ್ದು ಎಲ್ಲರಿಗೂ ಖುಷಿ ನೀಡುತಿತ್ತು.

**ಉಪನ್ಯಾಸ:**

ಮಧ್ಯಾಹ್ನ 2ಕ್ಕೆ ನಡೆದ ಸಮುದಾಯ ವಾಸ್ತವ್ಯ ಶಿಬಿರದ ಎರಡನೇ ಅವಧಿಯಲ್ಲಿ ಸಕಲೇಶಪುರ ಜೆಎಸ್ಎಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಶಿವಕುಮಾರ್ ಆರ್ ರವರು ಶಿಕ್ಷಕ ಮತ್ತು ಸಮುದಾಯ ಎಂಬ ವಿಷಯದ ಕುರಿತಂತೆ ಮಾತನಾಡುತ್ತಾ ಮಹಾಭಾರತದ ಕಾಲಘಟ್ಟದಲ್ಲಿ ಪಡೆಯುತ್ತಿದ್ದ ಶಿಕ್ಷಣ, ಪ್ರಸ್ತುತ ನಾವು ಪಡೆಯುತ್ತಿರುವ ಶಿಕ್ಷಣ ಹಾಗೂ ಶಿಕ್ಷಕರಾಗಲು ಹೊರಟಿರುವ ನಾವುಗಳು ಮುಂದಿನ ದಿನಗಳಲ್ಲಿ ಸಮುದಾಯದೊಂದಿಗೆ ನಡೆದುಕೊಳ್ಳಬೇಕಾದ ರೀತಿಯ ಕುರಿತಂತೆ ತಿಳಿಸಿದರು.

ಉಪಸ್ಥಿತರಿದ್ದ ನಾರ್ವೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಎಸ್.ಬಿ ಕೃಷ್ಣೇಗೌಡರು ಕಾರ್ಯಕ್ರಮದ ಅಥಿತಿಗಳಾಗಿ ಆಗಮಿಸಿ ಶಿಬಿರದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವ ಮೂಲಕ ಮುಂದಿನ ದಿನಗಳಲ್ಲಿ ನೀವು ನಿಮ್ಮ ಗ್ರಾಮಗಳಲ್ಲಿ ಸಮಾಜಮುಖಿ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಲು ತಿಳಿಸಿದರು.

ಉಪಸ್ಥಿತರಿದ್ದ ಮಾಜಿ ತಾಲ್ಲೂಕು ಪಂಚಾಯತಿ ಸದಸ್ಯರಾದ ಶ್ರೀ ಸೋಮಯ್ಯರವರು ಮಾತನಾಡುತ್ತಾ ನಾಲ್ಕು ಗೋಡೆಗಳ ಶಿಕ್ಷಣಕ್ಕೂ ಸಮುದಾಯದೊಂದಿಗೆ ನೀವು ಪಡೆಯುವ ಶಿಕ್ಷಣಕ್ಕೂ ಬಹಳ ವ್ಯತ್ಯಾಸವಿದ್ದು ಅದರ ಲಾಭವನ್ನು ಸಂಪೂರ್ಣ ಪಡೆದುಕೊಳ್ಳಲು ಸೂಚಿಸಿದರು.


ಕಾರ್ಯಕ್ರಮದಲ್ಲಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಶ್ರೀ ದೇವರಾಜು, ಜೆಎಸ್ಎಸ್ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಸುರೇಶ್ ಪಿ ರವರು, ಸಿಬ್ಬಂದಿ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573134
Hassan Dist.




**ಮನೋವೈಜ್ಞಾನಿಕ ಆಟಗಳು:**

ಸಂಜೆ 4ಕ್ಕೆ ಶಿಬಿರದಲ್ಲಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕಾಳೇಗೌಡ ರವರು ಶಿಬಿರಾರ್ಥಿಗಳಿಗೆ ವ್ಯಕ್ತಿತ್ವ ವಿಕಸನಕ್ಕೆ ಮನೋ ವೈಜ್ಞಾನಿಕ ಆಟಗಳು ಹಾಗೂ ಶಿಬಿರಾರ್ಥಿಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಿ ಕೇವಲ 10 ನಿಮಿಷಗಳಲ್ಲಿ ಗುಂಪಿನ ಎಲ್ಲರೂ ಚರ್ಚಿಸಿ ಭಾಗವಹಿಸುವಂತಹ ವಿಶೇಷ ಸ್ಪರ್ಧೆಗಳನ್ನು (ಶೂಟಿಂಗ್ ತಯಾರಿ, ಬಸ್ ಸಂಚಾರ, ಮದುವೆ ತಯಾರಿ ಹಾಗೂ ಮೈಮ್ ಶೋ ಏರ್ಪಡಿಸಿದರು.


ಸಂಜೆ 6ಕ್ಕೆ ಶಿಬಿರದ ಧ್ವಜವನ್ನು ಇಳಿಸಲಾಯಿತು. ನಿತ್ಯವೂ ಬೆಳಗ್ಗೆ ಧ್ವಜವನ್ನು ಏರಿಸುವುದು ಹಾಗೂ ಸಂಜೆ ಇಳಿಸವ ಜವಾಬ್ದಾರಿಯನ್ನು ಶಿಬಿರಾರ್ಥಿಗಳು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

ಸಂಜೆ 7ಕ್ಕೆ ಶಿಬಿರಾರ್ಥಿಗಳು ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ನೆರೆದಿದ್ದ ಗ್ರಾಮಸ್ಥರನ್ನು ರಂಜಿಸುವ ಮೂಲಕ ಸಾಮಾಜಿಕ ಕಳಕಳಿಯನ್ನು ಮನದಟ್ಟು ಮಾಡಿಕೊಟ್ಟರು.

ರಾತ್ರಿ 10ಕ್ಕೆ ಶಿಭಿರಾಧಿಕಾರಿಗಳು, ಸಿಬ್ಬಂದಿ ವರ್ಗದವರು ಹಾಗೂ ಶಿಬಿರಾರ್ಥಿಗಳ ಸಮ್ಮುಖದಲ್ಲಿ ದಿನದ ಎಲ್ಲಾ ಕೆಲಸ ಕಾರ್ಯಗಳನ್ನು ಅವಲೋಕಿಸಲಾಯಿತು.

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

**ಶಿಬಿರದ ಎರಡನೇ ದಿನ:-**

**ಭಜನೆ :-**

ಎರಡನೇ ಹಾಗೂ ಮೂರನೇ ದಿನದ ಬೆಳಗ್ಗೆ 30 ನಿಮಿಷಗಳ ಸಮಯ ಶಿಬಿರಾರ್ಥಿಗಳಿಗೆ ಭಜನೆ ಆಯೋಜಿಸಲಾಗಿತ್ತು. ದೇವರನ್ನು ಒಲಿಸಿಕೊಳ್ಳಲು ಜ್ಞಾನಮಾರ್ಗ, ಕರ್ಮಮಾರ್ಗ ಹಾಗೂ ಯೋಗವಾರ್ಗಕ್ಕಿಂತ ಭಕ್ತಿಮಾರ್ಗವೇ ಅತ್ಯುತ್ತಮ ಎನ್ನುವುದು ಜ್ಞಾನಿಗಳಾದ ಪುರಂದರದಾಸ, ಕನಕದಾಸ, ರಾಮಕೃಷ್ಣ ಪರಮಹಂಸ ಸೇರಿದಂತೆ ಹಲವರು ಕಂಡುಕೊಂಡ ಮಾರ್ಗವನ್ನು ನಾವು ಶಿಬಿರದಲ್ಲಿ ಅನುಸರಿಸಿದ್ದೇವೆ.

ಮತ್ತೊಂದು ನೆನಪಿರಲಿ ಭಕ್ತಿಯಿಂದ ನಾವು ಭಗತವಂತನ ಹಾಡುಗಳನ್ನು ಹೇಳಿದರೆ ಭಗವಂತ ಅತ್ಯಂತ ಸಂತೋಷದಿಂದ ಕುಳಿತು ಕೇಳುತ್ತಾನೆ. ನಾವು ಕುಳಿತುಕೊಂಡು ಭಜಿಸಿದರೆ ಭಗವಂತ ನಿಂತು ಕೇಳುತ್ತಾನೆ. ನಿಂತು ಹಾಡಿದರೆ ಭಗವಂತ ಸಂತೋಷಪಟ್ಟು ನಲಿದು ಕುಣಿಯುತ್ತಾನೆ. ಭಗವಂತನನ್ನು ತೃಪ್ತಿಪಡಿಸಲು ಇರುವಂತಹ ಏಕೈಕ ಮಾರ್ಗ ಅದು ಭಜನೆಯೊಂದೆ.

ನಿತ್ಯ ಭಜನೆಯನ್ನು ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕಾಳೇಗೌಡರು ಪ್ರಶಿಕ್ಷಣಾರ್ಥಿಗಳಿಗೆ ಹೇಳಿಕೊಟ್ಟರು.






PRINCIPAL
J.S.S. Institute of Education
P.B. 26, SAKALESHPUR-57313
Hassan Dist.

**ವ್ಯಾಯಾಮ:**

ಭಜನೆಯ ನಂತರ 6.30 ರಿಂದ 7.30 ರವರೆಗೆ ಶಿಬಿರಾರ್ಥಿಗಳಿಗೆ ಲಘು ವ್ಯಾಯಾಮವನ್ನು ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕಾಳೇಗೌಡರವರು ನಡೆಸಿಕೊಟ್ಟರು.





**ಸ್ವಚ್ಛತಾಕಾರ್ಯ:**

ಒಟ್ಟು 3 ದಿನಗಳ ಕಾಲ ನಡೆದ ಶಿಬಿರದ ವೇಳೆ 5 ತಂಡಗಳಾಗಿ ಶ್ರಮ ದಾನ ಮಾಡಿದ ಪ್ರಶಿಕ್ಷಣಾರ್ಥಿಗಳು, ಅಶ್ವತಕಟ್ಟೆಯನ್ನು ಸ್ವಚ್ಛಗೊಳಿಸಿ ಸುಣ್ಣ ಬಳಿದು ಸಿಂಗರಿಸುವುದರೊಂದಿಗೆ ಗ್ರಾಮದ ಮುಖ್ಯ ರಸ್ತೆಯ ಇಕ್ಕೆಲಗಳಲ್ಲಿ ಚೆಲ್ಲಾಡಿದ್ದ ಪ್ಲಾಸ್ಟಿಕ್ ಸಂಗ್ರಹಿಸಿ ಪ್ಲಾಸ್ಟಿಕ್ ಮುಕ್ತ ಗ್ರಾಮ ಮಾಡುವಂತೆ ಗ್ರಾಮಸ್ಥರನ್ನು ಮನವೊಲಿಸುವ ಪ್ರಯತ್ನ ಮಾಡುವುದು ಸೇರಿದಂತೆ ವಿವಿಧ ಕಡೆ ಚರಂಡಿಗಳನ್ನೂ ಸ್ವಚ್ಛಗೊಳಿಸಿದರು. ಒಟ್ಟಾರೆ ಸಮುದಾಯ ವಾಸ್ತವ್ಯ ಶಿಬಿರದಲ್ಲಿ ಶಿಬಿರಾರ್ಥಿಗಳು ಸ್ವಚ್ಛತೆಗೆ ಮೊದಲ ಪ್ರಾಶಸ್ತ್ಯ ನೀಡಿ ಗ್ರಾಮಸ್ಥರ ಪ್ರಶಂಸೆಗೆ ಪಾತ್ರರಾದರು.







PRINCIPAL
J.S.S. Institute of Education
P.B. 26, SAKALESHPUR-573134
Hassan Dist.

**ಸಂವಾದ ಕಾರ್ಯಕ್ರಮ:**

ಬೆಳಗ್ಗೆ 11.30ಕ್ಕೆ ಚಿಂತಕರು ಹಾಗೂ ಕಾಫಿ ಬೆಳೆಗಾರರಾದ ಯಡೇಹಳ್ಳಿ ಆರ್ ಮಂಜುನಾಥ್ ರವರು ಜೀವನ ರೂಪಿಸುವಲ್ಲಿ ತಂದೆ, ತಾಯಿ ಹಾಗೂ ಗುರುವಿನ ಪಾತ್ರದ ಕುರಿತಂತೆ ಸಂವಾದ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸಂವಾದ ಕಾರ್ಯಕ್ರಮದಲ್ಲಿ ಮೊದಲಿಗೆ ತಂದೆ, ತಾಯಿ ಹಾಗೂ ಗುರುವಿನ ಪಾತ್ರದ ಬಗ್ಗೆ ಉದಾಹರಣೆಗಳೊಂದಿಗೆ ತಿಳಿಸುತ್ತಾ ಶಿಬಿರಾರ್ಥಿಗಳು ವಿಷಯದ ಕುರಿತಂತೆ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಸಂವಾದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಸಂವಾದ ಕಾರ್ಯಕ್ರಮದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ. ದಿನೇಶ್ ರವರು, ನಾರ್ವೆ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಜ್ಯೋತಿ ಎಸ್ ರವರು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.









PRINCIPAL
J.S.S. Institute of Education
P.B. 26, SAKALESHPUR-573134
Hassan Dist.

**ಉಪನ್ಯಾಸ:-**

ಮಧ್ಯಾಹ್ನ 2.30ಕ್ಕೆ ಬೇಲೂರು ವಿಧಾನಸಭೆ ಕ್ಷೇತ್ರದ ಶಾಸಕರಾದ ಶ್ರೀ ಲಿಂಗೇಶ್ ರವರು ಆಗಮಿಸಿ ಪ್ರಶಿಕ್ಷಣಾರ್ಥಿಗಳಾದ ತಾವುಗಳು ರಾಷ್ಟ್ರೀಯ ಚಿಂತನೆಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸಿದರು. ಇದೇ ಸಂದರ್ಭದಲ್ಲಿ ಸಂಸ್ಥೆಯ ಹಿರಿಯ ವಿದ್ಯಾರ್ಥಿ ಹಾಗೂ ಬೇಲೂರು ತಾಲ್ಲೂಕು ಪಂಚಾಯತಿಯ ಸಹಾಯಕ ನಿರ್ದೇಶಕರಾದ ಶ್ರೀ ಗುರುಪ್ರಸಾದ್ ರವರು ಉಪಸ್ಥಿತರಿದ್ದರು.







**ಸಾಮಾಜಿಕ ಮತ್ತು ಆರ್ಥಿಕ ಗ್ರಾಮ ಸಮೀಕ್ಷೆ:**

ಶಿಬಿರಾರ್ಥಿಗಳು ನಾರ್ವೆ ಗ್ರಾಮದ ಪ್ರತಿ ಮನೆ ಮನೆಗೂ ತೆರಳಿ ಕುಟುಂಬದ ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆ ನಡೆಸಿಕೊಂಡು ಬಂದರು. ಯಾವುದೋ ಆರೋಗ್ಯಕರ ಮತ್ತು ಒಳ್ಳೆಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರನ್ನು ತಲುಪುವ ಮೊಟ್ಟಮೊದಲ ವ್ಯವಸ್ಥೆಯೇ ಪಂಚಾಯತ್ ಗಳು ಅವುಗಳಿಂದ ಕುಟುಂಬಕ್ಕೆ ದೊರೆಯುತ್ತಿರುವ ಸೌಲಭ್ಯಗಳ ಬಗ್ಗೆ ಪಟ್ಟಿ ಸಂಗ್ರಹಿಸಿಕೊಂಡು ಬಂದರು.

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

**ಸಾಂಸ್ಕೃತಿಕ ಕಾರ್ಯಕ್ರಮಗಳು:-**

ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ನಾರ್ವೆ ಗ್ರಾಮದಲ್ಲಿ ನಡೆಯುತ್ತಿರುವ ಸಮುದಾಯ ವಾಸ್ತವ್ಯ ಶಿಬಿರದಲ್ಲಿ ನಡೆಯುತ್ತಿರುವ ಎರಡನೇ ದಿನದ ಸಾಂಸ್ಕೃತಿಕ ಕಾರ್ಯಕ್ರಮ.





**ಧನ್ಯತೆಯ ಭಾವ ಮೂಡಿಸಿದ 'ಮಾತೃ ಭೋಜನ'**

ಇಂದು ರಾತ್ರಿ 9ಕ್ಕೆ ಶಿಬಿರದಲ್ಲಿ ಆಯೋಜಿಸಿದ್ದ 'ಮಾತೃ ಭೋಜನ'ದಲ್ಲಿ ಜಾತಿ, ಭೇದ ಮರೆತು ಪ್ರಶಿಕ್ಷಣಾರ್ಥಿಗಳು ತಾಯಂದಿರು ಮನೆಯಿಂದ ತಂದಿದ್ದ ಊಟ ಸವಿದು ಸಂಭ್ರಮಿಸಿದರು.

ಪ್ರಶಿಕ್ಷಣಾರ್ಥಿಗಳಿಗಾಗಿ ಪೋಷಕರು ತರಕಾರಿ ಪಲಾವ್, ಕೇಸರಿ ಬಾತ್, ಉಪ್ಪಿಟ್ಟು, ಚಿತ್ರಾನ್ನ, ಮೊಸರನ್ನ, ಅನ್ನ ಸಾಂಬಾರ್, ಪಾಯಸ ಸೇರಿದಂತೆ ವಿವಿಧ ಬಗೆಯ ಅಡುಗೆ ಸಿದ್ಧಪಡಿಸಿಕೊಂಡು ಬಂದಿದ್ದರು. ಅವರಿವರೆನ್ನದೆ ಎಲ್ಲರೂ ಬಡಿಸಿದ ಊಟವನ್ನು ಸವಿದ ಪ್ರಶಿಕ್ಷಣಾರ್ಥಿಗಳ ಮೊಗದಲ್ಲಿ ಸಂತಸ ಮನೆ ಮಾಡಿದರೆ, ಊಟ ಬಡಿಸಿದ ತಾಯಂದಿರಲ್ಲಿ ಧನ್ಯತೆಯ ಭಾವ ಕಂಡುಬಂತು.

ನಾರ್ವೆ ಗ್ರಾಮಸ್ಥರು ಮಾತೃಭೋಜನಕ್ಕೆ ಚಾಲನೆ ನೀಡಿ ಮಾತನಾಡಿ, 'ಪ್ರಶಿಕ್ಷಣಾರ್ಥಿಗಳಿಗೆ ಮಾತೃ ಪ್ರೇಮದ ಸವಿತುತ್ತು ಉಣಿಸುವ ಈ ಕಾರ್ಯಕ್ರಮ ತುಂಬಾ ವೈಶಿಷ್ಟ್ಯವಾಗಿದೆ. ನಮ್ಮ ಸಂಸ್ಕೃತಿಯಲ್ಲಿನ ತಾಯಿ ಮಕ್ಕಳ ಬಾಂಧವ್ಯ ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಹೆಚ್ಚೆಚ್ಚು ನಡೆಯುವ ಅಗತ್ಯವಿದೆ' ಎಂದು ಹೇಳಿದರು. ಸಂಸ್ಥೆಯ ಹಿರಿಯ ವಿದ್ಯಾರ್ಥಿ ಹಾಗೂ ಗ್ರಾಮದ ಸದಸ್ಯರಾದ ಶ್ರೀ ಶಿವಕುಮಾರ್ ಮಾತನಾಡುತ್ತಾ 'ಪ್ರತಿ ಮನೆಯಲ್ಲಿ ತಾಯಿಯ ಪಾತ್ರ ಬಹುಮುಖ್ಯ. ಇಂದು ಎಲ್ಲಾ ತಾಯಂದಿರು ವೈವಿಧ್ಯಮಯ ಹಾಗೂ ರುಚಿಕರವಾದ ಅಡಿಗೆ



PRINCIPAL
J.S.S. Institute of Education
P.B. 26, SAKALESHPUR-573134
Hassan Dist

ಮಾಡಿಕೊಂಡು ಜಾತಿ, ಮತ ಭೇದ ಬದಿಗಿಟ್ಟು ಪ್ರಶಿಕ್ಷಣಾರ್ಥಿಗಳಿಗೆ ಊಟ ಮಾಡಿಸಿ ಜಾತ್ಯಾತಿತೆಯನ್ನು ಎತ್ತಿಹಿಡಿದಿದ್ದಾರೆ. ಇದೇ ಮಾತೃಭೋಜನದ ಬಹುಮುಖ್ಯ ಆಶಯ' ಎಂದರು.





**ಶಿಬಿರದ ಮೂರನೇ ದಿನ:-**

**ಚಾರಣ:**

ಇಂದು ಬೆಳಗ್ಗೆ, ಭಜನೆ ಹಾಗೂ ವ್ಯಾಯಾಮ ಮುಗಿಸಿದ ನಂತೆ ನಾರ್ವೆ ಗ್ರಾಮಕ್ಕೆ ಸಮೀಪವಿರು ಹಳೇ ನಾರ್ವೆ ಗ್ರಾಮದ ಶ್ರೀ ಮಲ್ಲೇಶ್ವರ ದೇವಸ್ಥಾನವನ್ನು ವೀಕ್ಷಿಸಲು ಕಾಲ್ನಡುಗೆಯಲ್ಲಿ ಸಿಬ್ಬಂದಿ ವರ್ಗದವರು ಹಾಗೂ ಶಿಬಿರಾರ್ಥಿಗಳು ತೆರಳಿದ್ದರು. ಶಿಬಿರ ಸ್ಥಾನದಿಂದ ಎರಡು ಕಿಲೋ ಮೀಟರ್ ದೂರದಲ್ಲಿರುವ ಹಳೇ ನಾರ್ವೆ ಗ್ರಾಮಕ್ಕೆ ತೀರಾ ನಿಧಾನವಲ್ಲದ, ವೇಗವೂ ಅಲ್ಲದ ನಡಿಗೆಯಲ್ಲಿ ತಲುಪಿದಾಗ ಪ್ರಶಿಕ್ಷಣಾರ್ಥಿಗಳ ಮುಖದಲ್ಲಿ ಮೂಡಿದ ಭಾವ ಅವರ್ಣನೀಯ. ಹೇಳಿ ಕೇಳಿ ಮಲೆನಾಡ ಮಡಿಲಲ್ಲಿರುವ ಸುಮಾರು 450 ವರ್ಷಗಳಷ್ಟು ಹಳೇಯದಾದ ಮಲ್ಲೇಶ್ವರ ದೇವಸ್ಥಾನ ಹಾಗೂ ಮತ್ತೊಂದು ವಿಶೇಷ ಜತನದಲ್ಲಿ ಕಾಪಿಟ್ಟ ಪ್ಲಾಸ್ಟಿಕ್, ಕಸರಹಿತ ವಾತಾವರಣ, ಮತ್ತು ಹೋಗಲು ಬರಲು ಒಂದೇ ದಾರಿ ಎಲ್ಲರ ಸುಸ್ತನ್ನು ಮರೆಸುವಂತಹ ವಾತಾವರಣದ ಜೊತೆ ಜೊತೆಗೆ ಕನ್ನಡ ನಾಡಿನ ಹೆಮ್ಮೆಯ ನಟ ಕ್ರೇಜಿಸ್ಟಾರ್ ರವಿಚಂದ್ರನ್ ರವರು ಸಿಪಾಯಿ ಸಿನಿಮಾ ಚಿತ್ರೀಕರಿಸಿದ ಸುಮಾರು 250 ವರ್ಷಕ್ಕೂ ಹಳೆಯದಾದ ಹಾಗೂ ನಮ್ಮ ಹಿಂದಿನ ತಲೆಮಾರು ನೆನಪಿಸುವಂತಹ ತುಂಬಾ ಸುಂದರವಾದ ಸೊಗಸಾದ ಮನೆಯಲ್ಲಿ ಪ್ರಶಿಕ್ಷಣಾರ್ಥಿಗಳು ಸೆಲ್ಫೀ ಹಾಗೂ ಫೋಟೋ ಕ್ಲಿಕ್ಕಿಸುವ ಮೂಲಕ ಚಾರಣದ ನೆನಪನ್ನು ಶಾಶ್ವತವಾಗಿ ಉಳಿಯುವಂತೆ ಮಾಡಿಕೊಂಡರು.





PRINCIPAL
J.S.S. Institute of Education
P.B. 26, SAKALESHPUR-573134
Hassan Dist

**ಸಮಾರೋಪ ಸಮಾರಂಭ:**

ಸಮಾರೋಪ ಭಾಷಣ ಮಾಡಲು ಆಗಮಿಸಿದ ಸಕಲೇಶಪುರ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಆನಂದ ಮೂರ್ತಿ ಜಿ.ಡಿ ರವರು ಮಾತನಾಡುತ್ತಾ ಶಿಬಿರಾರ್ಥಿಗಳಿಗೆ ಸಮುದಾಯದ ಬದುಕು ಹಾಗೂ ಜೀವನ ಶೈಲಿಯ ಕುರಿತಂತೆ ಪ್ರಾಯೋಗಿಕವಾಗಿ ತಿಳಿದುಕೊಳ್ಳಲು ಈ ರೀತಿಯ ಶಿಬಿರಗಳು ಬಹಳ ಉಪಯುಕ್ತವಾಗಲಿವೆ ಎಂದು ತಿಳಿಸುತ್ತಾ ತಮ್ಮ ವ್ಯಾಸಾಂಗದ ಸಂದರ್ಭದಲ್ಲಿ ಭಾಗವಹಿಸಿದ ಶಿಬರಗಳು ಹಾಗೂ ಅವುಗಳಿಂದ ಕಲಿತ ಪಾಠದ ಬಗ್ಗೆ ತಿಳಿಸಿ ಶಿಬಿರದ ಸದುಪಯೋಗವನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಾರ್ಥಕತೆ ಹೊಂದಬೇಕೆಂದರು.

ಸಮಾರೋಪ ಸಮಾರಂಭದಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ಎಸ್, ಶಿಬಿರಾಧಿಕಾರಿ ಶ್ರೀ ನಂಜುಂಡಸ್ವಾಮಿ ಕೆ. ಎಸ್. ರವರು, ಸಿಬ್ಬಂದಿ ವರ್ಗದವರು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

JSS Mahavidyapeetha, Mysore - 04
**JSS INSTITUTE OF EDUCATION**
(Recognized by the NCTE and Affiliated to university Mysore, Mysore)
Sakleshpur – 573134, PB No 26, Hassan Dist.
Email: jssioebedskp@gmail.com website: https://jssioebedskp.org.in Phone No: 97405 91647

# Criterion – 03: Research & Outreach Activities

## Key Indicator 3.3-Outreach Activities





**Metric No. 3.3.1 Average number of outreach activities organized by the institution during the last five years**

## 2022-23

# ಪೋಲಿಸ್ ಇಲಾಖೆ ವತಿಯಿಂದ ಸ್ಪರ್ಧಾತ್ಮಕ ಪರೀಕ್ಷೆಗೆ ಪೂರ್ವ ತಯಾರಿ ಕುರಿತಂತೆ ಕಾರ್ಯಗಾರ






ಸ್ಪರ್ಧಾತ್ಮಕ ಪರೀಕ್ಷೆ ಪೂರ್ವ ತಯಾರಿ ಕಾರ್ಯಾಗಾರ ಉದ್ಘಾಟನಾ ಸಂದರ್ಭದ ಚಿತ್ರ.



ಸ್ಪರ್ಧಾತ್ಮಕ ಪರೀಕ್ಷೆ ಪೂರ್ವ ತಯಾರಿ ಕಾರ್ಯಾಗಾರಕ್ಕೆ ಆಗಮಿಸಿದ ವಿದ್ಯಾರ್ಥಿಗಳು




ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ ಐಪಿಎಸ್, ಐಎಎಸ್ ಹಾಗೂ ಕೆ.ಎ.ಎಸ್ ಅಧಿಕಾರಿಗಳು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಿರುವುದು.


ದಿನಾಂಕ 02-02-2023 ರ ಗುರುವಾರ ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ಸಕಲೇಶಪುರ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಹಾಸನ ಜಿಲ್ಲಾಡಳಿತದ ಸಹಯೋಗದೊಂದಿಗೆ ಪ್ರಶಿಕ್ಷಣಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ಕುರಿತಂತೆ ಕಾರ್ಯಗಾರವನ್ನು ಏರ್ಪಡಿಸಿದ್ದರು. ಆ ಕಾರ್ಯಕ್ರಮದಲ್ಲಿ ನಮ್ಮ ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಐಪಿಎಸ್, ಐಎಎಸ್ ಹಾಗೂ ಕೆ.ಎ.ಎಸ್ ಅಧಿಕಾರಿಗಳು ಭಾಗವಹಿಸಿದರು.


PRINCIPAL
J.S.S. Institute of Education
P.B. 26, SAKALESHPUR-573 1
Hassan Dist

# ರ್‍ಯಾಗಿಂಗ್ ತಡೆಯುವ ಬಗ್ಗೆ ಅರಿವು ಕಾರ್ಯಕ್ರಮ



"ರ್‍ಯಾಗಿಂಗ್ ತಡೆಯುವ ಬಗ್ಗೆ ಅರಿವು ಕಾರ್ಯಕ್ರಮದಲ್ಲಿ ಉಪನ್ಯಾಸದಲ್ಲಿ ನೀಡುತ್ತಿರುವ
ನಿವೃತ್ತ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಮೀನಾಕ್ಷಿ ಖಾದರ್ ರವರು







ದಿನಾಂಕ 22-02-2023 ರ ಬುಧವಾರ ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ರ್‍ಯಾಗಿಂಗ್ ತಡೆಯುವ ಬಗ್ಗೆ ಅರಿವು ಕಾರ್ಯಕ್ರಮವನ್ನು ನಡೆಸಲಾಯಿತು.

ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿ ಆಗಮಿಸಿದ ನಿವೃತ್ತ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಮೀನಾಕ್ಷಿ ಖಾದರ್ ರವರು ರ್‍ಯಾಗಿಂಗ್ ವಿಧಗಳ ಕುರಿತಂತೆ ವಿವರಿಸುತ್ತಾ ಕಾಲೇಜು ಆವರಣದಲ್ಲಿ ರ್‍ಯಾಗಿಂಗ್ ಮಾಡುವುದರಿಂದ ವಿದ್ಯಾರ್ಥಿಗಳು ಅನುಭವಿಸುವ ನೋವುಗಳ ಬಗ್ಗೆ ವಿವರವಾಗಿ ವಿವರಿಸಿದರು. ನಂತರ ಕಾಲೇಜು ಆವರಣದಲ್ಲಿ ರ್‍ಯಾಗಿಂಗ್ ತಡೆಗಟ್ಟಲು ಯುಜಿಸಿ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸುತ್ತಾ, ಕಾಲೇಜುಗಳ ಪ್ರಾಸ್ಪೆಕ್ಟಸ್ ಮತ್ತು ಬ್ರೋಚರ್‌ಗಳಲ್ಲಿ ಆ್ಯಂಟಿ ರ್‍ಯಾಗಿಂಗ್ ಬಗ್ಗೆ ಸ್ಪಷ್ಟ ಎಚ್ಚರಿಕೆ ಪ್ರಕಟಿಸಬೇಕು, ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಅಳವಡಿಸಬೇಕು, ಆ್ಯಂಟಿ ರ್‍ಯಾಗಿಂಗ್ ಕಮಿಟಿಯ ನೋಡೆಲ್ ಆಫಿಸರ್ ಅವರ ಸಂಪೂರ್ಣ ವಿಳಾಸ ಮತ್ತು ಸಂಪರ್ಕ ಸಂಖ್ಯೆಯನ್ನು ಕಾಲೇಜುಗಳ ವೆಬ್‌ಸೈಟ್, ಮಾಹಿತಿ ಬುಕ್‌ಲೆಟ್ ಸೇರಿದಂತೆ ವಿದ್ಯಾರ್ಥಿಗಳಿಗೆ ಸುಲಭವಾಗಿ ಲಭ್ಯವಾಗುವಂತೆ ಪ್ರಕಟಿಸಬೇಕು ಎಂದು ತಿಳಿಸಿದರು.

ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ವಿಕ್ರಮ ಸಿ.ಬಿ ರವರು ಕಾಲೇಜು ಆವರಣದಲ್ಲಿ ರ್‍ಯಾಗಿಂಗ್ ಮಾಡಿದರವರನ್ನು ಅಥವಾ ನಿಯಮ ಉಲ್ಲಂಘಿಸಿದ ವಿದ್ಯಾರ್ಥಿಗಳ ವಿರುದ್ಧ ಕಠಿಣ ಕ್ರಮ ತೆಗದುಕೊಳ್ಳಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ಎಸ್ ರವರು ಸಂಸ್ಥೆಯ ಸಿಬ್ಬಂದಿ ವರ್ಗದವರು ಪ್ರಶಿಕ್ಷಣಾರ್ಥಿಗಳೊಂದಿಗೆ ನಿರಂತರ ಸಂಪರ್ಕ, ಅವರಿಗೆ ಆಪ್ತಸಮಾಲೋಚನೆ ಹಾಗೂ ಆ್ಯಂಟಿ ರ್‍ಯಾಗಿಂಗ್ ಕಮಿಟಿ ಸದಸ್ಯರು ಕಾಲೇಜಿನ ಒಳಾಂಗಣ, ಹೊರಾಂಗಣ, ಹಾಸ್ಟೆಲ್‌ಗಳು ಸೇರಿದಂತೆ ಕ್ಯಾಂಪಸ್ ನ ವಿವಿಧ ಸ್ಥಳಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಬೇಕು' ಎಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

# FIELD VISIT REPORT

## 17th AND 18th MARCH -2023

Field visit is an important part of the teacher training program which is mandatory as per the guidelines of mysore university incorporated in the curriculum present in the 3rd semester of training program. There is a paper called Inclusive Education, which is all about the children with disability, their characteristics, identification and how these children will get education, what are the facilities needed by them and condition of the disabled children in the society. All these things are mentioned in the syllabus by that we can learn those things theoretically in our regular classes.

In order to know the condition of these children practically our teacher educators organized a field visit for special schools, for that purpose we start our journey on 17th March 2023 from Sakaleshpur to Mysore. We left the Sakaleshpur at 4:45 am on the way we had our breakfast at 7.30am at Berya near KR Nagar. After having the breakfast, we reached Mysore at 9.30am.

Foremost we visited **JSS Sahana School Saraswathipuram, Mysore** at 9.30am which is specially meant for disabled children. There we got lot of information from the Head master and teaching staff. They explained in detail about the identification, characteristics, causes, problems and educational provisions for specially challenged children.






They are also called intellectual disabled children, we learnt about the characteristics, causes, problems, treatment and what are the educational implications that can be provided to them. Mainly we learnt how to handle these type of specially challenged children. Teachers of Sahana school were very humble, kind hearted, supportive and they have lot of patience with the children. Then we met the children and they introduce themselves and they are very happy and innocent. There are many children and everyone are unique behavioral pattern and disorders in their own way. Their response was very good. We thanked JSS Sahana School head master and school staff for their kind support and cooperation.


We moved to **AIISH (All India Institute of Speech and Hearing)**, there we attended the session conducted by Dr.Hruthik, Dr.Revathi and Dr.Kadambari who are well known for their service in the field of special education. They gave lot of information about disabled children. Thereafter, we visited LABOTOY, which is the combination of Lab, Library and Toy section. We saw the parents encouraging sitting with their children and helping to involve them in activities.






Afternoon at 1.30 pm we entered in to JC campus, Mysore. Then we move to **JSS Polytechnic for differently abled children**. There we had our lunch and we attended the class of Elangovan, Principal of JSS Polytechnic for differently abled children. He gave the brief introduction, aims and objectives of their college and he also gave some information about disabled students who are admitted to

different types of technical courses. Then we visited the computer lab, in that class, we saw a blind student operating the computer easily. Then we attended the physics class where teacher gave instructions in the form of sign language. We also observed brail machine in the computer lab. There after we visited the jewelry section where ornaments are designed by the students using their skill and creativity. Finally we thank Principal and staff of JSS Polytechnic for differently abled children for their kind support and cooperation.







Then we stepped towards **Shukavana** located in Ganapathi Sachidanada Ashrama. There we saw variety of birds bought form different countries of the world. We visited bonsai garden, there we observed different species of plants and how they are conserved and protected in a good atmospheric condition. Then we moved from bonsai garden and near by the temple we had tea and snacks.

We stepped towards **Chamundi hills,** there we took darshana and blessings from Goddesses Chamundeshwari. At last we went to **Suttur,** there Suttur free school hostel staff arranged dinner for us and they gave separate rooms for boys and girls to take rest. We have taken rest in Suttur mutt and finally we completed our first day of Educational excursion successfully on 17$^{th}$ of March 2023.

Next day, we woke up at early morning and moved towards **"Suttur Sri Shivarathreeshwara temple"** and **"Kapila River"** and we took blessings from Shivrathreeshwara Swamy. After that we had our tea/coffee nearby temple and

then we visited Akkamahadevi girl's hostel and spent some time with the students who were studying in Sutturu B.Ed College. We again went to suttur dasoha bhavana, there we had our morning breakfast. Then we moved towards **Talakaadu,** it was very adventurous and beautiful place, we enjoyed a lot in sand heaps and the river Cauvery. We also visited five temples in Talakaadu and we moved towards **Somanathapura** and **Mudukthore Temple.** We took blessings from lard Mallikarjuna and travelled for **Bannur** and we completed our afternoon lunch there itself. After that we visited **"Tippu Mosque"**, it was very nice and inspirational place and we moved for **"Balmuri"** falls but unfortunately we are unable to watch water falls because it was hot summer the water was very less to play.

Finally we moved to **KRS Brundavan Garden.** It was very beautiful memory to us. One of the friend of our Vikram sir, sri Lingaraju, Police Sub inspector, KRS gave a lot of information and tips for the preparation of competitive exams. He also explained how to prepare for the competitive examinations in future. After that we had our snacks and we got free entry to KRS with the help of sri Lingaraju sir.





Then we entered Brundavan garden and we enjoyed with our friends and we started our Journey towards to Sakaleshpura at 8.30 pm. We finished our meal at Nanjundeshwara mess, Berya and we continued our journey and reached Sakleshpur at 12.30pm. At last we successfully completed 2 days of trip with lot of memorable moments and educational experiences and values of B.Ed course

2023. We thank our professors for giving this beautiful opportunity to create good memories and have a wide range of knowledge about differently abled children.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist


# ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರ


ಸಕಲೇಶಪುರ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ (ಬಿ.ಇಡಿ ಕಾಲೇಜು) 2022-23 ನೇ ಸಾಲಿನ ಪ್ರಥಮ ಹಾಗೂ ಮೂರನೇ ಸೆಮಿಸ್ಟರ್ ಪ್ರಶಿಕ್ಷಣಾರ್ಥಿಗಳಿಗೆ **23 ಮಾರ್ಚ್ 2023 ರಂದು ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರವನ್ನು** ಆಯೋಜಿಸಲಾಗಿತ್ತು. ಪ್ರಶಿಕ್ಷಣಾರ್ಥಿಗಳಿಗೆ **ಟಿಇಟಿ, ಸಿಇಟಿ ಹಾಗೂ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವತಯಾರಿ, ಅಧ್ಯಯನ ಸಾಮಗ್ರಿ ಆಯ್ಕೆ, ವಿವಿಧ ಹುದ್ದೆಗಳಿಗೆ ಅರ್ಜಿ ಹಾಕುವ ವಿಧಾನ, ಪಠ್ಯಕ್ರಮಕ್ಕೆ ಅನುಗುಣವಾಗಿ ಓದುವುದು, ವಿಷಯಕ್ಕೆ ತಕ್ಕಂತೆ ಸಮಯ ಜೋಡಣೆ, ಹಳೆಯ ಪ್ರಶ್ನೆ ಪತ್ರಿಕೆ ಬಿಡಿಸುವ ವಿಧಾನ**ಗಳನ್ನು ತಿಳಿಸಿಕೊಡುವುದು ಇದರ ಮುಖ್ಯ ಉದ್ದೇಶವಾಗಿತ್ತು.



ಸಹಾಯಕ ಪ್ರಾಧ್ಯಾಪಕರು ಹಾಗೂ ಕಾರ್ಯಕ್ರಮದ ಸಂಯೋಜಕರಾದ ಡಾ. ದಿನೇಶ್ ಎಂ. ಕೆ ರವರು ಕಾರ್ಯಾಗಾರಕ್ಕೆ ಆಗಮಿಸಿದ ಸಂಪನ್ಮೂಲ ವ್ಯಕ್ತಿಗಳನ್ನು ಪರಿಚಯಿಸಿ ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ವಿಯಾಗಲು ಕಠಿಣ ಪರಿಶ್ರಮ, ಪೂರ್ವ ಸಿದ್ಧತೆ ಹಾಗೂ ಸೂಕ್ತ ಮಾರ್ಗದರ್ಶನದ ಅವಶ್ಯಕತೆ ಇದೆ ಎಂದು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ತಿಳಿಸಿದರು.

ಕಾರ್ಯಕ್ರಮದ ಮೊದಲ ಅಧಿವೇಶನದಲ್ಲಿ **ಟಿಇಟಿ, ಸಿಇಟಿ ಅಭ್ಯಾಸ ಪತ್ರಿಕೆ ಹಾಗೂ ಇತಿಹಾಸ** ವಿಷಯದ ಕುರಿತಾಗಿ ಉಪನ್ಯಾಸ ನೀಡಲು ಆಗಮಿಸಿದ **ವಿಸ್ಮಯ ವಿಜೇತ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಹಾಸನ ಜಿಲ್ಲಾ ಸಹ ಪ್ರಧಾನ ಸಂಪಾದಕರಾದ ಕುಮಾರಿ ವಿನಯ ಆರ್** ರವರು ಬದುಕಿನಲ್ಲಿ ಎಲ್ಲರೂ ಉನ್ನತ ಮಟ್ಟದ ಗುರಿಯನ್ನು ಹೊಂದಿರಬೇಕು ಹಾಗೂ ಆ ಗುರಿಯನ್ನು ಮುಟ್ಟಲು ಸತತ ಪ್ರಯತ್ನವನ್ನು ನಡೆಸುತ್ತಿರಬೇಕು ಎಂದು ತಿಳಿಸುತ್ತಾ ಟಿಇಟಿ ಹಾಗೂ ಸಿಇಟಿಯ ಪಠ್ಯ ಕ್ರಮ, ಅಂಕಗಳ ಹಂಚಿಕೆ, ಪ್ರಶ್ನೆ ಪತ್ರಿಕೆ ವಿನ್ಯಾಸದ ಕುರಿತಾಗಿ ಸಂಪೂರ್ಣ ಮಾಹಿತಿ ನೀಡಿದರು.



ಕಾರ್ಯಕ್ರಮದಲ್ಲಿ **ಸಾಮಾಜ್ಯ ಜ್ಞಾನ, ಭಾರತದ ಸಂವಿಧಾನ ಹಾಗೂ ಭೂಗೋಳಶಾಸ್ತ್ರದ ಕುರಿತಾಗಿ ವಿಶೇಷ ಉಪನ್ಯಾಸ ನೀಡಲು ಆಗಮಿಸಿದ ಶ್ರೀ ಶಿವಕುಮಾರ ಶೆಟ್ಟಿಹಳ್ಳಿ** ರವರು ಪ್ರಶಿಕ್ಷಣಾರ್ಥಿಗಳಿಗೆ ಎಲ್ಲರೂ ಧನಾತ್ಮಕವಾಗಿ ಚಿಂತಿಸಿ ಧನಾತ್ಮಕ ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಿ ಎಂದು ತಿಳಿಸುತ್ತಾ ಶಿಕ್ಷಕರು ವಿಭಿನ್ನವಾದ ಶೈಲಿಯಲ್ಲಿ ಬೋಧಿಸಬೇಕು, ಹೊಸ ಹೊಸ ತಂತ್ರಜ್ಞಾನಗಳ ಬಳಕೆಯಲ್ಲಿ ನಿಪುಣರಾಗಬೇಕು ಮತ್ತು ಬೋಧಿಸುವ ವಿಷಯವನ್ನು ಪ್ರೀತಿಸಬೇಕು ಹಾಗೂ ವಿಷಯದ ಕುರಿತಾಗಿ ಪ್ರಭುತ್ವ ಹೊಂದಿರಬೇಕು ಹಾಗಾದಾಗ ಮಾತ್ರ ಪರಿಣಾಮಕಾರಿಯಾಗಿ ಬೋಧಿಸಲು ಸಾಧ್ಯ ಎಂದು ತಿಳಿಸುತ್ತಾ ಸಾಮಾನ್ಯ ಜ್ಞಾನ ಕುರಿತಾಗಿ ಜ್ಞಾನ ವೃದ್ಧಿಸಿಕೊಳ್ಳಲು ಯಾವ ವಿಷಯಗಳನ್ನು ಓದಬೇಕು, ಚಿತ್ರಗಳನ್ನು ಬರೆದು ಮುಖ್ಯಾಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಹೇಗೆ ಎಂಬುದನ್ನು ವಿವರವಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ಎಸ್ ರವರು ಮಾತನಾಡುತ್ತಾ, ಕ್ರಮಬದ್ಧವಾಗಿ ಅಧ್ಯಯನ ನಡೆಸಿದಾಗ ಮಾತ್ರ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ವಿಯಾಗಲು ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಥಮ ಹಾಗೂ ಮೂರನೇ ಸೆಮಿಸ್ಟರ್ ಪ್ರಶಿಕ್ಷಣಾರ್ಥಿಗಳು, ಬೋಧಕ ಹಾಗೂ ಬೋಧಕೇತರ ಉಪಸ್ಥಿತರಿದ್ದರು.

***** - *****

PRINCIPAL
J.S.S. Institute of Education
P.B. 26, SAKALESHPUR-573 134
Hassan Dist


# ಮತದಾನ ಹಕ್ಕು: ಜಾಗೃತಿ ಜಾಥಾ

**ಸಕಲೇಶಪುರ:** ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಸಕಲೇಶಪುರ ತಾಲ್ಲೋಕಿನಲ್ಲಿ ಮತದಾನ ಪ್ರಮಾಣ ಹೆಚ್ಚಿಸುವ ಸಲುವಾಗಿ ಸಕಲೇಶಪುರ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ 12 ಏಪ್ರಿಲ್ 2023ರ ಬುಧವಾರ ಬೆಳಗ್ಗೆ 10.30ಕ್ಕೆ ಮತದಾನ ನಮ್ಮ ಹಕ್ಕು ಜಾಗೃತಿ ಜಾಥಾ ಆಯೋಜಿಸಲಾಗಿತ್ತು.





ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಿಂದ ಆರಂಭಗೊಂಡ ಜಾಥಾ ಕೌಡಳ್ಳಿ ಗ್ರಾಮದ ನಾನಾ ರಸ್ತೆ, ವೃತ್ತಗಳ ಮುಖಾಂತರ ಆನೇಮಹಲ್ ಸಮೀಪದವರೆಗೂ ನಡೆಯಿತು. ಪ್ರಶಿಕ್ಷಣಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರನ್ನೊಳಗೊಂಡ ಕಾಲ್ನಡಿಗೆ ಜಾಥಾಕ್ಕೆ ತಾಲ್ಲೋಕು ದಂಡಾಧಿಕಾರಿಗಳಾದ ಶ್ರೀಮತಿ ಮೇಘನ ಜಿ ರವರು ಹಸಿರು ನಿಶಾನೆ ತೋರಿಸಿದರು.




ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ -2023ರ ಕುರಿತು ಹಮ್ಮಿಕೊಂಡಿದ್ದ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ನಮ್ಮ ಮತ ನಮ್ಮ ಹಕ್ಕು, ನಮ್ಮ ಸಂವಿಧಾನ ನಮ್ಮ ಮತದಾನ ಮುಂತಾದ ಘೋಷಣೆಗಳನ್ನು ಪ್ರಶಿಕ್ಷಣಾರ್ಥಿಗಳಿಂದ ಕೂಗಿಸಲಾಯಿತು. ಯುವ

ಮತದಾರರು ಮತ ಚಲಾಯಿಸುವ ಬಗ್ಗೆ ಗ್ರಾಮೀಣ ಪ್ರದೇಶಗಳಲ್ಲಿರುವ ಜನರಲ್ಲಿ ಮತದಾನದ ಅರಿವು ಮೂಡಿಸಲು ಸರ್ಕಾರ ನಾನಾ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮತದಾನ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸುವುದೇ ಈ ಜಾಥಾದ ಮುಖ್ಯ ಉದ್ದೇಶವಾಗಿದೆಯಲ್ಲದೆ ಯುವಮತದಾರರು ಸೇರಿದಂತೆ ಮತಹೊಂದಿದ ಪ್ರತಿಯೊಬ್ಬ ಪ್ರಜೆಯು ಮತದಾನ ಮಾಡುವ ಮೂಲಕ ತಮ್ಮ ಇಚ್ಛೆಯ ಸರ್ಕಾರವನ್ನು ತಾವೇ ರಚನೆಮಾಡಿ ಕೊಳ್ಳಬೇಕೆಂದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ದಿನೇಶ್ ಎಂ.ಕೆ ರವರು ಮಾತನಾಡುತ್ತಾ ಮತದಾನ ಒಂದು ನಮ್ಮ ಸಂವಿದಾನ ನೀಡಿರುವ ಒಂದು ಹಕ್ಕು ಮತ್ತು ವರ. ಯಾರೂ ಕೂಡ ಯಾವುದೇ ಆಮಿಷಕ್ಕೆ ಒಳಗಾಗದೇ ಮೇ. 10 ರಂದು ಕಡ್ಡಾಯವಾಗಿ ಮತದಾನ ಮಾಡಬೇಕು ಎಂದರು.

ಕಾಲ್ನಡಿಗೆ ಜಾಥಾದುದ್ದಕ್ಕೂ ಪ್ರಶಿಕ್ಷಣಾರ್ಥಿಗಳು ನಿಮ್ಮ ವೋಟು ನಿಮ್ಮ ಹಕ್ಕು, ನಿಮ್ಮ ಮತ ದೇಶಕ್ಕೆ ಹಿತ, ನಿಮ್ಮ ನಡೆ ಬೂತಿನ ಕಡೆ ಮುಂತಾದ ಘೋಷಣೆಗಳನ್ನು ಕೂಗಿದರು.





ಈ ಸಂದರ್ಭದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ. ದಿನೇಶ್ ಎಂ.ಕೆ, ಸಂಯೋಜನಾಧಿಕಾರಿಗಳಾದ ಶ್ರೀ ಮಂಜುನಾಥ ಆರ್, ಮತದಾನ ಜಾಗೃತಿ ಸಂಘದ ಸಂಚಾಲಕರಾದ ಶ್ರೀ ಕಾಳೇಗೌಡ, ಸಿಬ್ಬಂದಿ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು ಇದ್ದರು.

ಕಾರ್ಯಕ್ರಮವನ್ನು ಸಂಯೋಜನಾಧಿಕಾರಿಗಳಾದ ಶ್ರೀ ಮಂಜುನಾಥ ಆರ್ ರವರು ನೆರೆದಿದ್ದ ಎಲ್ಲರನ್ನೂ ಸ್ವಾಗತಿಸಿದರು. ಪ್ರಶಿಕ್ಷಣಾರ್ಥಿ ದೀಪ್ತಿ ರವರು ಅಚ್ಚುಕಟ್ಟಾಗಿ ನಿರೂಪಿಸಿದ ನಂತರ ಸಹಾಯಕ ಪ್ರಾಧ್ಯಾಪಕರಾದ ಡಾ. ಪ್ರಭುಸ್ವಾಮಿ ರವರು ಎಲ್ಲರನ್ನೂ ವಂದಿಸಿದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

# ಅಣಕು ಸಂದರ್ಶನ ಕಾರ್ಯಕ್ರಮ

ಶ್ರೀ ಹೆಚ್.ಎನ್ ದೇವರಾಜು (ದಿವಾನ್) ರವರು ಮಾತನಾಡುತ್ತಾ, ಸುತ್ತೂರು ಮಠದ ಶ್ರೀಗಳು ಮತ್ತು ಅವರ ನಡುವೆ ಹೇಗೆ ಸಂಬಂಧ ಬೆಳೆದು ಬಂತು ಎಂಬುದರ ಬಗ್ಗೆ ವಿವರವಾಗಿ ತಿಳಿಸುತ್ತಾ, ಶ್ರೀ ಮಠದ ಸಾಮಾಜಿಕ ಸೇವೆಯನ್ನು ಉದಾಹರಣೆ ಸಹಿತ ಪರಿಚಯಿಸಿದರು. ಪ್ರಸ್ತುತ ಜಗದ್ಗುರುಗಳವರು ಯಾವುದೇ ಪ್ರಚಾರವನ್ನು ಅಪೇಕ್ಷಿಸದೆ ನಾಡಿನ ಉದ್ಧಾರಕ್ಕಾಗಿ ತಮ್ಮನ್ನೇ ತಾವೇ ಅರ್ಪಿಸಿಕೊಂಡಿದ್ದಾರೆ ಎಂದರು. ಮಲೆನಾಡಿನಲ್ಲಿ ಸಂಸ್ಥೆಗಳನ್ನು ಸ್ಥಾಪಿಸಿ, ಈ ಭಾಗದ ಮಕ್ಕಳಿಗೆ ಉತ್ತಮ ನೈತಿಕ ಶಿಕ್ಷಣ ನೀಡುತ್ತಿರುವುದು ಸ್ಮರಣೀಯ. ಅದಕ್ಕಾಗಿ ನಾವೆಲ್ಲರೂ ಋಣಿಯಾಗಿರಬೇಕು ಹಾಗೂ ಇಂತಹ ಪುಣ್ಯಾತ್ಮರನ್ನು ನೆನಪಿಸಿಕೊಳ್ಳಲು ಜಯಂತಿ ಮಹೋತ್ಸವದಲ್ಲಿ ಅವಕಾಶ ಸಿಕ್ಕಿರುವುದು ನಮ್ಮ ಪೂರ್ವಜನ್ಮದ ಪುಣ್ಯದ ಫಲ ಎಂದು ಹೇಳಿ, ಭಾಗವಹಿಸಿದ ಅತಿಥಿಗಳಿಗೆ, ಪ್ರತಿಭಾ ಪುರಸ್ಕಾರ ಪಡೆದ ವಿದ್ಯಾರ್ಥಿಗಳಿಗೆ ಶುಭ ಕೋರಿದರು.

- **ಆಶೀರ್ವಚನ**



ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ **ಅರಕಲಗೂಡು ಶ್ರೀ ದೊಡ್ಡಮಠದ ಪೂಜ್ಯ ನಿ.ಪ್ರ.ಸ್ವ. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಆಶೀರ್ವಚನ** ದಯಪಾಲಿಸುತ್ತಾ, ಲಿಂಗೈಕ್ಯ ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಕಾರ್ಯಕ್ರಮವನ್ನು ಆಚರಿಸುವುದರಿಂದ ನಮಗಾಗುವ ಪ್ರಯೋಜನ ಹಾಗೂ ಸಮಾಜಕ್ಕೆ ಶ್ರೀಗಳು ನೀಡಿರುವ ಕೊಡುಗೆಯ ಬಗ್ಗೆ ತಿಳಿಸುತ್ತಾ, ಯಾರೆಲ್ಲಾ ತಮ್ಮ ಜೀವಿತಾವಧಿಯಲ್ಲಿ ಪುಣ್ಯ ಕಾರ್ಯಗಳನ್ನು ಮಾಡಿರುತ್ತಾರೋ ಅಂತಹ ವ್ಯಕ್ತಿಗಳನ್ನು ಸಮಾಜ ಎಂದಿಗೂ ಮರೆಯುವುದಿಲ್ಲ ಎನ್ನುವುದಕ್ಕೆ ಸಾಕ್ಷಿ ನಮ್ಮ ಸ್ವಾಮೀಜಿರವರು, ನಮ್ಮ ಮಲೆನಾಡು ಭಾಗಕ್ಕೆ ಶ್ರೀ ಸಿದ್ದಗಂಗಾ ಮಠ ಹಾಗೂ ಶ್ರೀ ಸುತ್ತೂರು ಮಠಗಳು ಎರಡು ಕಣ್ಣುಗಳಿದ್ದಂತೆ, ಸಂಸ್ಕಾರದಿಂದ ಕೂಡಿದ ಜ್ಞಾನವಿದ್ದರೆ ಮಾತ್ರ ವ್ಯಕ್ತಿಗೆ ಭೂಷಣ ಅಂತಹ ಸಂಸ್ಕಾರಯುತ ಶಿಕ್ಷಣವನ್ನು ಮಠ ಮಾನ್ಯಗಳಿಂದ ಮಾತ್ರ ನೀಡಲು ಸಾಧ್ಯ ಎಂದು ತಿಳಿಸುತ್ತಾ ಇಂತಹ ಮಹನೀಯರ ಜಯಂತಿ ಕಾರ್ಯಕ್ರಮಗಳನ್ನು ಕುಣಿದು ಕುಪ್ಪಳಿಸುತ್ತಾ ಆಚರಿಸುವಂತಾಗಬೇಕು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀಗಳ ಭಾವಚಿತ್ರದೊಂದಿಗೆ ಮೆರವಣಿಗೆಯಲ್ಲಿ ಭಾಗವಹಿಸಿ ಕುಣಿದು ಕುಪ್ಪಳಿಸಿ ಉತ್ಸಾಹದಿಂದ ಮೆರವಣಿಗೆ ಮಾಡಿದ್ದು ಶ್ರೀಗಳವರ ಆತ್ಮಕ್ಕೆ ಖಂಡಿತವಾಗಿಯೂ ಸಂತೋಷವನ್ನುಂಟು ಮಾಡಿರುತ್ತದೆ ಎಂದು ತಿಳಿಸಿದರು.



ಭಾರತ ವಸುದೈವ ಕುಟುಂಬಕಂ ಆಲೋಚನೆ-ಯನ್ನು ಹೊಂದಿರುವ ದೇಶವಾದ್ದರಿಂದ ಇಡೀ ಜಗತ್ತು ಒಂದು ಕುಟುಂಬ ಆದ್ದರಿಂದ ನಾವೆಲ್ಲರೂ ಧರ್ಮ ಸಹಿಷ್ಣುಗಳಾಗಿ ಎಲ್ಲಾ ಧರ್ಮವನ್ನೂ ಸಹಿಸಬೇಕು ಹಾಗೂ ನಮ್ಮ ಧರ್ಮವನ್ನು ಅಭಿನಂದಿಸಬೇಕು ಎಂದು ತಿಳಿಸುತ್ತಾ ಎಲ್ಲರೂ ತಮ್ಮ ತಮ್ಮ ಮಕ್ಕಳಿಗೆ ಸಂಸ್ಕಾರ ಕಲಿಸುವಲ್ಲಿ ಗಮನ ಹರಿಸಿ ಎಂದು ತಮ್ಮ ನುಡಿ ನಮನಗಳನ್ನು ಪೂಜ್ಯರಿಗೆ ಅರ್ಪಿಸಿ ಆಶೀರ್ವಚನ ನೀಡಿದರು.

- **ವಂದನಾರ್ಪಣೆ**

ಸಮಾರಂಭ ಬೆಳಗ್ಗೆ 11.30 ಕ್ಕೆ ಪ್ರಾರಂಭವಾಗಿ ಅಪರಾಹ್ನ 2 ಗಂಟೆಗೆ ಮುಕ್ತಾಯವಾಯಿತು. ಈ ಸಂದರ್ಭದಲ್ಲಿ ಪೂಜ್ಯ ಶ್ರೀಗಳವರಿಗೆ, ಅತಿಥಿಗಣ್ಯರಿಗೆ, ಆಹ್ವಾನಿತರಿಗೆ, ಪತ್ರಕರ್ತರಿಗೆ, ಪೋಷಕರಿಗೆ, ಶ್ರೀ ಮಠದ ಭಕ್ತರಿಗೆ ವಿದ್ಯಾರ್ಥಿಗಳಿಗೆ ಸಕಲೇಶಪುರದ ಜೆಎಸ್‌ಎಸ್ ಸ್ವತಂತ್ರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಶಿವಕುಮಾರ್ ಆರ್.ಎಂ ರವರು ವಂದನೆಗಳನ್ನು ಸಲ್ಲಿಸಿದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಪರವಾಗಿ ಸಮಾರಂಭದಲ್ಲಿ ಭಾಗವಹಿಸಿದ ಪೂಜ್ಯರಿಗೆ ಫಲಪುಷ್ಪ ನೀಡಿ ಭಕ್ತಿ ಸಮರ್ಪಣೆ ಮತ್ತು ಸಮಾರಂಭದಲ್ಲಿ ಹಾಜರಿದ್ದ ಪೂಜ್ಯರಿಗೆ, ಅತಿಥಿಗಣ್ಯರಿಗೆ ಮತ್ತು ಆಹ್ವಾನಿತರಿಗೆ ರಾಜೇಂದ್ರ ಶ್ರೀಗಳವರ ಕುರಿತು ರಚಿತವಾಗಿರುವ ಕಾಯಕ ತಪಸ್ವಿ ಮತ್ತು ಶ್ರೀ ಸಿದ್ಧೇಶ್ವರ ಸ್ವಾಮಿಯವರು ರಚಿಸಿರುವ ಭಕ್ತಿಯೋಗ ಪುಸ್ತಕಗಳನ್ನು ವಿತರಿಸಲಾಯಿತು.

- **ಪ್ರಸಾದದ ವ್ಯವಸ್ಥೆ**





ಶ್ರೀ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಅತಿಥಿ ಗಣ್ಯರಿಗೆ, ವಿದ್ಯಾರ್ಥಿಗಳಿಗೆ, ಪೋಷಕರಿಗೆ, ಶ್ರೀ ಮಠದ ಭಕ್ತರಿಗೆ ಹಾಗೂ ಭಾಗವಹಿಸಿದ ಸಾರ್ವಜನಿಕರಿಗೆ ಶ್ರೀ ಮಲೆನಾಡು ವೀರಶೈವ ಸಮಾಜದ ಸಹಕಾರದೊಂದಿಗೆ ಬೆಳಗ್ಗೆ ಮತ್ತು ಮಧ್ಯಾಹ್ನ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿತ್ತು. ಸುಮಾರು 1500 ಕ್ಕೂ ಹೆಚ್ಚು ಜನರು ಪ್ರಸಾದವನ್ನು ಸ್ವೀಕರಿಸಿದರು.

ಸಕಲೇಶಪುರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಎಲ್ಲಾ ಮುಖ್ಯಸ್ಥರುಗಳು ಹಾಗೂ ನೌಕರರ ವರ್ಗ ಪೂರ್ವ ತಯಾರಿ ಮಾಡಿಕೊಂಡು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 108ನೇ ಜಯಂತಿ ಮಹೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮತ್ತು ವ್ಯವಸ್ಥಿತವಾಗಿ ವಿಜೃಂಭಣೆಯಿಂದ ಆಚರಿಸಲಾಯಿತು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

✓ ಜನಹಿತ ದಿನಪತ್ರಿಕೆ (ದಿನಾಂಕ 24 ಸೆಪ್ಟೆಂಬರ್ 2023)

# ಸುತ್ತೂರು, ಸಿದ್ದಗಂಗಾ ಮಠ ರಾಜ್ಯದ ಎರಡು ಕಣ್ಣುಗಳಿದ್ದಂತೆ



ಸಕಲೇಶಪುರ: ಸುತ್ತೂರು ಹಾಗೂ ಸಿದ್ಧಗಂಗಾ ಮಠಗಳು ರಾಜ್ಯದ ಎರಡು ಕಣ್ಣುಗಳಿದ್ದಂತೆ ಎಂದು ಅರಕಲಗೂಡು ದೊಡ್ಡ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಜಿ ಹೇಳಿದರು.

ಶನಿವಾರ ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಮಲೆನಾಡುವೀರಶೈವ ಸಮಾಜ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಸಂಯುಕ್ತವಾಗಿ ಹಮ್ಮಿಕೊಂಡಿದ್ದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ 108 ನೇ ಜಯಂತಿ ಮಹೋತ್ಸವದಲ್ಲಿ ಆಶೀರ್ವಚನ ನೀಡಿ, ಸಮಕಾಲಿನ ಸಮಾಜಕ್ಕೆ ಅಗತ್ಯವಿರುವುದನ್ನು ಮನಗಂಡು ಅವುಗಳನ್ನು ಕಾರ್ಯಗತಗೊಳಿಸುವ ಮೂಲಕ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಜಿ ಹಾಗೂ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮಿಜಿ ಮಹಾತ್ಮಾರದರು. 19 ನೇ ಶತಮಾನದಲ್ಲಿ ರಾಜ್ಯದಲ್ಲಿದ್ದ ಅನಕ್ಷರತೆಯನ್ನು ಗುರುತಿಸಿ ಸಂಕಷ್ಟದ ಮಧ್ಯೆ ವಿದ್ಯಸಂಸ್ಥೆಗಳನ್ನು ಸ್ಥಾಪಿಸಿ ತ್ರಿವಿಧದಸೋಹ ನಿರ್ವಹಿಸುವ ಮೂಲಕ ಈ ಇಬ್ಬರು ಶ್ರೀಗಳು ಇಂದಿಗೂ ಜೀವಂತವಾಗಿದ್ದಾರೆ. ಸಮಾಜದಿಂದ ಎಲ್ಲವನ್ನು ಪಡೆ "ಯುವ ನಾವು ಸಮಾಜಕ್ಕೆ ಕಿಂಚಿತ್ತು ಸಹಾಯ ಮಾಡದೆ ಹೋದರೆ ನಿಮ್ಮ ಜೀವನಕ್ಕೆ ಅರ್ಥ ಬರುವುದಿಲ್ಲ. ಸ್ವಾರ್ಥರಹಿತ ಸೇವೆ ನಮ್ಮನ್ನು ಎತ್ತರದ ಸ್ಥಾನಕ್ಕೆ ಕೊಂಡೊಯ್ಯಲಿದೆ. ಮಹಾತ್ಮಾರ ಜಯಂತಿಯ ಆಚರಣೆ ಅವರ ಜೀವನದ ಸಂದೇಶವನ್ನು ಮುಂದಿನ ಜನಾಂಗಕ್ಕೆ ಕೊಂಡೊಯ್ಯುವುದಾಗಿದೆ. ಆದ್ದರಿಂದ ಕಾಟಚಾರಕ್ಕೆ ಜಯಂತಿಯಲ್ಲಿ ಪಾಲ್ಗೊಳ್ಳದೆ ಉತ್ತಮ ಸಂದೇಶಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳ ಬೇಕು ಎಂದರು. ಸುತ್ತೂರು ಮಠದಲ್ಲಿ ವಿದ್ಯಾಭ್ಯಾಸ ಪಡೆದ ವಿದ್ಯಾರ್ಥಿಗಳಿಗೆ ಜಗತ್ತಿನಾದ್ಯಂತ ಉತ್ತಮ ಮನ್ನಣೆ ಇದೆ. ನಮ್ಮ ದೇಶ ಎಲ್ಲ ರಂಗದಲ್ಲೂ ಶರವೇಗದಲ್ಲಿ ಬೆಳೆಯುತ್ತಿದ್ದು ಬೆಳೆಯುತ್ತಿರುವ ದೇಶಕ್ಕೆ ನಮ್ಮಿಂದ ಏನಾದರು ಕಾಣಿಕೆ ನೀಡ ಬೇಕು ಎಂಬ ತುಡಿತ ಇಂದಿನ ಯುವ ಜನ ರಲ್ಲಿ ಮೂಡಬೇಕಿದೆ ವ್ಯವಸ್ಥೆಯನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳಲು ಶಿಕ್ಷಣ ಹಾಗೂ ಸಂಸ್ಕಾರ ಅಗತ್ಯವಿದೆ. ಶಿಕ್ಷಣ ಪಡೆಯುವ ವೇಳೆ ವಿದ್ಯಾರ್ಥಿಗಳಲ್ಲಿ ಉತಹ ಇರಬೇಕು ಇದರಿಂದ ಮಾತ್ರ ಸಾಧನೆ ಸಾಧ್ಯ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಸಿಮೆಂಟ್ ಮಂಜು ಮಾತನಾಡಿ,ಮಲೆನಾಡಿನಲ್ಲಿ ಶಿಕ್ಷಣ ಕ್ರಾಂತಿ ಉಂಟುಮಾಡಿದ ಕೀರ್ತಿ ಸುತ್ತೂರು ಮಠಕ್ಕೆ ಸಲ್ಲುತ್ತದೆ. ತಾಲೂಕಿನಲ್ಲಿ ಮಠದವತಿಯಿಂದ ಮತ್ತಷ್ಟು ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ಅಗತ್ಯವಿದೆ. ಕೇವಲ ಧಾರ್ಮಿಕ ಕ್ಷೇತ್ರಕ್ಕೆ ಸೀಮಿತವಾಗದೆ ಬಡಮಕ್ಕಳಿಗೆ ಅನ್ನ,ವಸತಿ ಹಾಗೂ ಶಿಕ್ಷಣ ನೀಡುತ್ತಿರುವ ಮಠ ಮತ್ತಷ್ಟು ಎತ್ತರಕ್ಕೆ ಬೆಳೆಯಲಿ ಎಂದರು.

ಉಪವಿಭಾಗಾಧಿಕಾರಿ ಡಾ.ಎಂ.ಕೆ ಶೃತಿ ಮಾತನಾಡಿ ದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ರಕ್ತದಾನ ಶಿಬಿರ ಹಾಗೂ ಕೌಡಳ್ಳಿ ಶ್ರವಣದೋಷ ಮಕ್ಕಳಿಗೆ ಹಣ್ಣುಹಂಪಲು ವಿತರಿಸಲಾಯಿತು. ವಿಶ್ವನಾಥ್, ಮಲೆನಾಡುವೀರಶೈವ ಸಮಾಜದ ಅಧ್ಯಕ್ಷ ದಿವಾನ್, ಕಾರ್ಯದರ್ಶಿ ಮೂಗಲಿ ಧರ್ಮ ರಾಜ್, ಮುಖಂಡರಾದ ಶಿವ ಪ್ರಸಾದ್,ವಿದ್ಯಾಶಂಕರ್,ಕಾಂಗ್ರೆಸ್ ಮುಖಂಡರಾದ ಮುರುಳಿ ಮೋಹನ್, ಎಚ್.ಎಚ್ ಉದಯ್ ಜೆಎಸ್‌ಎಸ್ ಸಂಸ್ಥೆಯ ಮುಖ್ಯಸ್ಥ ಮಂಜುನಾಥ್ ಮುಂತಾದವರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

## ದಿನಾಂಕ 23 ಸೆಪ್ಟೆಂಬರ್ 2023 ರಂದು ಸಕಲೇಶಪುರದಲ್ಲಿ ನಡೆದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 108ನೆಯ ಜಯಂತಿ ಮಹೋತ್ಸವದ ಪತ್ರಿಕಾ ವರದಿಗಳು

✓ ಜನತಾ ಮಾಧ್ಯಮ ದಿನಪತ್ರಿಕೆ (ದಿನಾಂಕ 05 ಸೆಪ್ಟೆಂಬರ್ 2023)

05-09-2023 ಮಂಗಳವಾರ ಜನತಾ ಮಾಧ್ಯಮ

### ರಾಜೇಂದ್ರ ಮಹಾಸ್ವಾಮಿ 108ನೇ ಜಯಂತಿ: ಸ್ವಯಂ ಪ್ರೇರಿತ ರಕ್ತದಾನ



ಸಕಲೇಶಪುರ: ಯುವ ರೆಡ್‌ಕ್ರಾಸ್ ಘಟಕ, ಐಕ್ಯೂಎಸಿ ಘಟಕ, ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ, ಭಾರತೀಯರೆಡ್‌ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ, ಹಾಸನ ಮತ್ತು ತಾಲ್ಲೂಕು ಘಟಕ, ಸಕಲೇಶಪುರ,ರೋಟರಿ ಹಾಗೂ ಲಯನ್ಸ್ ಸಂಸ್ಥೆ ಸಕಲೇಶಪುರ ಇವರುಗಳ ಸಹಯೋಗದೊಂದಿಗೆ ಪರಮಪೂಜ್ಯ ಲಿಂಗೈಕ್ಯಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರಮಹಾ ಸ್ವಾಮಿಗಳವರ 108ನೇ ಜಯಂತಿ ಮಹೋತ್ಸವದ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಪರಮಪೂಜ್ಯ ಲಿಂಗೈಕ್ಯಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಸಲ್ಲಿಸಿ ಉದ್ಘಾಟಿಸಲಾಯಿತು.

ಈ ಶಿಬಿರದ ಉದ್ಘಾಟಕರಾಗಿ ಆಗಮಿಸಿದ ಎಸ್.ಎಸ್ ಪಾಷಾ, ನಿರ್ದೇಶಕರು, ಭಾರತೀಯರೆಡ್‌ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ, ಹಾಸನ ರವರು ಉದ್ಘಾಟನಾ ಭಾಷಣದಲ್ಲಿ ಪರಮಪೂಜ್ಯ ಲಿಂಗೈಕ್ಯಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 108ನೇ ಜಯಂತಿ ಮಹೋತ್ಸವದ ಅಂಗವಾಗಿ ಸ್ವಯಂ ಪ್ರೇರಿತರಕ್ತದಾನ ಶಿಬಿರವನ್ನು ಜೆಎಸ್‌ಎಸ್ ಶಿಕ್ಷಣ ಮಹಾ ವಿದ್ಯಾಲಯ ಆಯೋಜಿಸಿರುವುದು ಶ್ಲಾಘನೀಯವಾದುದು ಮತ್ತು ಅನುಕರಣೀಯವಾದುದು ಎಂದರು. ರಕ್ತದಾನ ಮಹಾದಾನವಾಗಿದ್ದು, ಯುವಕರು ರಕ್ತದಾನ ಮಾಡಲು ಮುಂದೆ ಬಂದುಜೀವ ಉಳಿಸುವ ಮಹಾತ್ಕಾರ್ಯಕ್ಕೆ ಕೈಜೋಡಿಸಬೇಕು ಎಂದರು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಹಾಸನ ಶಾಖೆಯ ಕಾರ್ಯದರ್ಶಿ ಶಬ್ಬೀರ್‌ಅಹಮದ್, ನಿರ್ದೇಶಕರಾದ ಹೆಚ್.ಡಿಕುಮಾರ್, ಸಂಯೋಜಕ ಹರ್ಷಿತ್ ಹೆಚ್.ಆರ್, ಸಕಲೇಶಪುರ ತಾಲ್ಲೂಕು ರೆಡ್‌ಕ್ರಾಸ್ ಘಟಕದ ಸಭಾಪತಿ ಶಾರದಗುರುಮೂರ್ತಿ, ಕಾರ್ಯದರ್ಶಿ ರೇಖಾ ಸುರೇಶ್, ಶ್ರೀ ಸದಾಶಿವ ಎಸ್.ಎಂ, ಅಧ್ಯಕ್ಷರು, ರೋಟರಿ ಸಂಸ್ಥೆ, ಸಕಲೇಶಪುರ, ಲಯನ್ ಬಬಿತ ವಿಶ್ವನಾಥ್, ಅಧ್ಯಕ್ಷರು, ಲಯನ್ಸ್‌ಕ್ಲಬ್, ಸಕಲೇಶಪುರ, ದೇವರಾಜು ಹೆಚ್.ಎನ್ (ದಿವಾನ್) ಅಧ್ಯಕ್ಷರು, ಮಲೆನಾಡು ವೀರಶೈವ ಸಮಾಜ, ಸಕಲೇಶಪುರ, ಶ್ರೀ ಲೋಹಿತ್ ಕೌಡಳ್ಳಿ, ಮಾಜಿಅಧ್ಯಕ್ಷರು, ಟಿ.ಎ.ಪಿ.ಸಿ.ಎಂ.ಎಸ್, ಸಕಲೇಶಪುರ, ಡಾ ನಾಗಲಕ್ಷ್ಮಿ, ಶ್ರೀ ಅಶ್ವತ್ ಹಾಸನ ಜಿಲ್ಲಾಸ್ಪತ್ರೆರಕ್ತನಿಧಿ ವಿಭಾಗ, ಹಾಸನ, ಜೆ ಎಸ್ ಎಸ್ ಶಿಕ್ಷಣ ಸಂಸ್ಥೆಗಳ ಎಲ್ಲಾ ಮುಖ್ಯಸ್ಥರುಗಳು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕಾಲೇಜಿನ ಸಿಬ್ಬಂದಿ ವರ್ಗದವರು, ಬಿಎಡ್‌ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ, ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾರನ್ನು ಡಾ ದಿನೇಶ್ ಎಂ.ಕೆ ಸಹಾಯಕ ಪ್ರಾಧ್ಯಾಪಕರು, ಸ್ವಾಗತಿಸಿದರು. ಈ ಸಂದರ್ಭದಲ್ಲಿ ಹೆಚ್ಚು ಬಾರಿ ರಕ್ತದಾನ ಮಾಡಿದ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಕಂಪ್ಯೂಟರ್ ಇನ್‌ಸ್ಟ್ರಕ್ಟರ್ ತಮ್ಮಯ್ಯ ಹೆಚ್.ಬಿ, ಇವರನ್ನು ಸನ್ಮಾನಿಸಲಾಯಿತು. ಡಾ ನಂಜುಂಡಪ್ಪ ಎಸ್ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಬಿಎಡ್ ಪ್ರಶಿಕ್ಷಣಾರ್ಥಿಶಿಲ್ಪಶ್ರೀ ಎಸ್ ಎಲ್ಲರನ್ನು ವಂದಿಸಿದರು.

✓ ವಿಜಯ ಕರ್ನಾಟಕ ದಿನಪತ್ರಿಕೆ (ದಿನಾಂಕ 05 ಸೆಪ್ಟೆಂಬರ್ 2023)

ಯುವಕರಿಗೆ ರೆಡ್ ಕ್ರಾಸ್ ಸಂಸ್ಥೆಯ ಪಾಷಾ ಮನವಿ

### ಸ್ವಯಂ ಪ್ರೇರಿತ ರಕ್ತದಾನಕ್ಕೆ ಮುಂದಾಗಿ

■ ವಿಕ ಸುದ್ದಿಲೋಕ ಹಾಸನ

ರಕ್ತದಾನ ಮಹಾದಾನವಾಗಿದ್ದು, ಯುವಕರು ರಕ್ತದಾನ ಮಾಡಲು ಮುಂದೆ ಬಂದು ಜೀವ ಉಳಿಸುವ ಮಹಾತ್ಕಾರ್ಯಕ್ಕೆ ಕೈಜೋಡಿಸಬೇಕು ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಶಾಖೆ ನಿರ್ದೇಶಕ ಎಸ್.ಎಸ್. ಪಾಷಾ ತಿಳಿಸಿದರು.

ಜೆಎಸ್‌ಎಸ್ ಶಿಕ್ಷಣ ಮಹಾದ್ಯಾಲಯ, ಯುವ ರೆಡ್‌ಕ್ರಾಸ್ ಘಟಕ, ಐಕ್ಯೂಎಸಿ ಘಟಕ, ಸಕಲೇಶಪುರ, ಭಾರತೀಯರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ, ಹಾಸನ ಮತ್ತು ತಾಲೂಕು ಘಟಕ ಸಕಲೇಶಪುರ, ರೋಟರಿ ಹಾಗೂ ಲಯನ್ಸ್ ಸಂಸ್ಥೆ ಸಕಲೇಶಪುರ ಆಶ್ರಯದಲ್ಲಿ ಲಿಂಗೈಕ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮೀಜಿಗಳ 108ನೇ ಜಯಂತ್ಯುತ್ಸವ ಪ್ರಯುಕ್ತ ಆಯೋಜಿಸಿದ್ದ 'ಸ್ವಯಂ ಪ್ರೇರಿತ ರಕ್ತದಾನ ಶಿಬಿರ' ಉದ್ಘಾಟಿಸಿ ಮಾತನಾಡಿದರು.

''ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಜೆಎಸ್‌ಎಸ್ ಶಿಕ್ಷಣ ಮಹಾ ವಿದ್ಯಾಲಯ ಆಯೋಜಿಸಿರುವುದು ಶ್ಲಾಘನೀಯ ಮತ್ತು ಅನುಕರಣೀಯ. ರಕ್ತವನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ. ಯುವಕರು ಸ್ವಯಂ ಪ್ರೇರಿತವಾಗಿ ರಕ್ತದಾನಕ್ಕೆ ಮುಂದಾಗಬೇಕು. ಈ ಮೂಲಕ ಅಮೂಲ್ಯ ಜೀವ ಕಾಪಾಡಬಹುದು,'' ಎಂದು ಅಭಿಪ್ರಾಯಪಟ್ಟರು.

ರೆಡ್‌ಕ್ರಾಸ್ ಸಂಸ್ಥೆ ಶಾಖೆಯ ಕಾರ್ಯದರ್ಶಿ ಶಬ್ಬೀರ್ ಅಹಮದ್, ನಿರ್ದೇಶಕ ಎಚ್.ಡಿ ಕುಮಾರ್, ಸಂಯೋಜಕ ಹರ್ಷಿತ್ ಎಚ್.ಆರ್, ಸಕಲೇಶಪುರ ತಾಲೂಕು ರೆಡ್‌ಕ್ರಾಸ್ ಘಟಕದ ಸಭಾಪತಿ ಶಾರದ ಗುರು ಮೂರ್ತಿ, ಕಾರ್ಯದರ್ಶಿ ರೇಖಾ ಸುರೇಶ್, ಸದಾಶಿವ ಎಸ್.ಎಂ., ಸಕಲೇಶಪುರ ಲಯನ್ಸ್ ಕ್ಲಬ್ ಅಧ್ಯಕ್ಷ ಬಬಿತ ವಿಶ್ವನಾಥ್, ಎಚ್.ಎನ್ ದೇವರಾಜು (ದಿವಾನ್), ಲೋಹಿತ್ ಕೌಡಳ್ಳಿ, ಡಾ.ನಾಗಲಕ್ಷ್ಮಿ, ಅಶ್ವತ್ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಎಲ್ಲಾ ಮುಖ್ಯಸ್ಥರು ಮತ್ತು ಸಿಬ್ಬಂದಿ ವರ್ಗ ಹಾಜರಿದ್ದರು.

ಕಾಲೇಜಿನ ಸಿಬ್ಬಂದಿ ವರ್ಗ ಹಾಗೂ ಬಿಎಡ್ ಪ್ರಶಿಕ್ಷಣಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು.



ಹಾಸನ ನಗರದಲ್ಲಿ ಯುವ ರೆಡ್‌ಕ್ರಾಸ್ ಘಟಕ, ಐಕ್ಯೂಎಸಿ ಘಟಕ, ಸಕಲೇಶಪುರದ ಜೆಎಸ್‌ಎಸ್ ಶಿಕ್ಷಣ ಮಹಾ ವಿದ್ಯಾಲಯ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ, ಸಕಲೇಶಪುರ ರೋಟರಿ ಹಾಗೂ ಲಯನ್ಸ್ ಸಂಸ್ಥೆ ಆಶ್ರಯದಲ್ಲಿ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ 108ನೇ ಜಯಂತಿ ಮಹೋತ್ಸವದ ಪ್ರಯುಕ್ತ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ನಡೆಯಿತು.

✓ ದಿಟ್ಟನುಡಿ ದಿನಪತ್ರಿಕೆ (ದಿನಾಂಕ 05 ಸೆಪ್ಟೆಂಬರ್ 2023)

# ಜೆಎಸ್‌ಎಸ್ ಕಾಲೇಜಿನಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ



ಸಕಲೇಶಪುರ: ಭಾರತೀಯ ಯುವ ರೆಡ್ ಕ್ರಾಸ್ ಘಟಕ, ಐಕ್ಯೂಎಸಿ ಘಟಕ, ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ, ಹಾಸನ ಮತ್ತು ತಾಲ್ಲೂಕು ಘಟಕ, ಸಕಲೇಶಪುರ, ರೋಟರಿ ಹಾಗೂ ಲಯನ್ಸ್ ಸಂಸ್ಥೆ ಸಕಲೇಶಪುರ ಇವರುಗಳ ಸಹಯೋಗದೊಂದಿಗೆ ಪರಮಪೂಜ್ಯ ಲಿಂಗೈಕ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 108ನೇ ಜಯಂತಿ ಮಹೋತ್ಸವದ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ದಿನಾಂಕ : 31 ಆಗಸ್ಟ್ 2023 ರ ಗುರುವಾರ ಬೆಳಗ್ಗೆ 10.30ಕ್ಕೆ ವಿದ್ಯುಕ್ತವಾಗಿ ಜ್ಯೋತಿ ಬೆಳಗಿಸಿ, ಪರಮಪೂಜ್ಯ ಲಿಂಗೈಕ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಸಲ್ಲಿಸಿ ಉದ್ಘಾಟಿಸಲಾಯಿತು. ಈ ಶಿಬಿರದ ಉದ್ಘಾಟಕರಾಗಿ ಆಗಮಿಸಿದ ಶ್ರೀ ಎಸ್.ಎಸ್. ಪಾಷಾ, ನಿರ್ದೇಶಕರು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ, ಹಾಸನ ರವರು ಉದ್ಘಾಟನಾ ಭಾಷಣದಲ್ಲಿ ಪರಮಪೂಜ್ಯ ಲಿಂಗೈಕ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 108ನೇ ಜಯಂತಿ ಮಹೋತ್ಸವದ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ ಇಲ್ಲಿ ಆಯೋಜಿಸಿರುವುದು ಶ್ಲಾಘನೀಯವಾದುದು ಮತ್ತು ಅನುಕರಣೀಯವಾದುದು ಎಂದರು. ರಕ್ತದಾನ ಮಹಾದಾನವಾಗಿದ್ದು, ಯುವಕರು ರಕ್ತದಾನ ಮಾಡಲು ಮುಂದೆ ಬಂದು ಜೀವ ಉಳಿಸುವ ಮಹತ್ಕಾರ್ಯಕ್ಕೆ ಕೈಜೋಡಿಸಬೇಕು ಎಂದರು. ಶ್ರೀ ಸುತ್ತೂರು ಮಠವು ಅನ್ನ, ಅರಿವು, ಆರೋಗ್ಯ, ಸಮಾಜ ಸುಧಾರಣೆ, ಧರ್ಮ ಜಾಗೃತಿಯನ್ನು ಮೂಡಿಸುವ ಸೇವಾ ಕಾರ್ಯಗಳನ್ನು ಮಾಡುತ್ತಿರುವುದು ಶ್ಲಾಘನೀಯ ಎಂದರು. ಈ ಕಾರ್ಯಕ್ರಮದಲ್ಲಿ ಶ್ರೀ ಸದಾಶಿವ ಎಸ್.ಎಂ, ಅಧ್ಯಕ್ಷರು, ರೋಟರಿ ಸಂಸ್ಥೆ, ಸಕಲೇಶಪುರ, ಲಯನ್ ಬಬಿತ ವಿಶ್ವನಾಥ್, ಅಧ್ಯಕ್ಷರು, ಲಯನ್ಸ್ ಕ್ಲಬ್, ಸಕಲೇಶಪುರ, ಶ್ರೀ ದೇವರಾಜು ಹೆಚ್.ಎನ್ (ದಿವಾನ್) ಅಧ್ಯಕ್ಷರು, ಶ್ರೀ ಮಲೆನಾಡು ವೀರಶೈವ ಸಮಾಜ, ಸಕಲೇಶಪುರ, ಶ್ರೀ ಲೋಹಿತ್ ಕೌಡಳ್ಳಿ, ಮಾಜಿ ಅಧ್ಯಕ್ಷರು, ಟಿ.ಎ.ಪಿ.ಸಿ.ಎಂ.ಎಸ್, ಸಕಲೇಶಪುರ, ಶ್ರೀ ಶಬೀರ್ ಅಹಮದ್, ಕಾರ್ಯದರ್ಶಿಗಳು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ, ಹಾಸನ, ಶ್ರೀ ಹೆಚ್.ಡಿ ಕುಮಾರ್, ನಿರ್ದೇಶಕರು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ, ಹಾಸನ ಶ್ರೀಮತಿ ಶಾರದ ಗುರುಮೂರ್ತಿ, ತಾಲ್ಲೂಕು ಸಭಾಪತಿಗಳು, ತಾಲ್ಲೂಕು ರೆಡ್ ಕ್ರಾಸ್ ಘಟಕ, ಸಕಲೇಶಪುರ ಶ್ರೀಮತಿ ರೇಖಾ ಸುರೇಶ್, ತಾಲ್ಲೂಕು ಕಾರ್ಯದರ್ಶಿ ತಾಲ್ಲೂಕು ರೆಡ್ ಕ್ರಾಸ್ ಘಟಕ, ಸಕಲೇಶಪುರ, ಡಾ. ನಾಗಲಕ್ಷ್ಮಿ, ಶ್ರೀ ಅಶ್ವತ್ ಹಾಸನ ಜಿಲ್ಲಾಸ್ಪತ್ರೆ ರಕ್ತನಿಧಿ ವಿಭಾಗ, ಹಾಸನ, ಜೆ ಎಸ್ ಎಸ್ ಶಿಕ್ಷಣ ಸಂಸ್ಥೆಗಳ ಎಲ್ಲಾ ಮುಖ್ಯಸ್ಥರುಗಳು, ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು. ನಮ್ಮ ಕಾಲೇಜಿನ ಸಿಬ್ಬಂದಿ ವರ್ಗದವರು, ಬಿಎಡ್ ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ, ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸದ ಎಲ್ಲಾ ಗಣ್ಯರನ್ನು ಡಾ। ದಿನೇಶ್ ಎಂ.ಕೆ ಸಹಾಯಕ ಪ್ರಾಧ್ಯಾಪಕರು, ರೆಡ್ ಕ್ರಾಸ್ ಯುವ ಘಟಕದ ಸಂಯೋಜಕರು ಇವರು ಆತ್ಮೀಯವಾಗಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಹೆಚ್ಚು ಬಾರಿ ರಕ್ತದಾನ ಮಾಡಿದ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಕಂಪ್ಯೂಟರ್ ಇನ್‌ಸ್ಟೆಕ್ಟರ್‌ರಾದ ಶ್ರೀ ತಮ್ಮಯ್ಯ ಹೆಚ್.ಬಿ, ಇವರನ್ನು ಸನ್ಮಾನಿಸಲಾಯಿತು. ಡಾ ನಂಜುಂಡಪ್ಪ ಎಸ್ ಪ್ರಾಂಶುಪಾಲರು ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಬಿಎಡ್ ಪ್ರಶಿಕ್ಷಣಾರ್ಥಿ ಶ್ರೀಮತಿ ಶಿಲ್ಪಶ್ರೀ ಎಸ್ ಎ ರವರು ಎಲ್ಲರನ್ನು ವಂದಿಸಿದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

JSS MAHAVIDYAPEETA, MYSORE-04

# JSS INSTITUTE OF EDUCATION

Sakleshpur-573134, Hassan Dist.


## Training Programme on Competitive Examination: A brief report





Training Programme on competitive examination held on 09-10-2023 at JSS Institute of Education, Sakleshpur.





Programme Co-ordinator Dr. Dinesh M K, Asst. Professor, JSS Institute of Education introduced and welcomed the gathering and resource persons Mr. Raghuram, Assistant professor and Mr. Harish R.J, Assistant professor at NDRK College of Education, Hassan.




In the first session Mr.Harish R. J, Assistant Professor, NDRK College of Education, Hassan has given valuable information about the various job avenues after the completion of B.Ed course and given complete information about IAS, IPS, IFS and other competitive examinations, examination pattern and syllabus of prelims and mains examinations.



In the second session, resource person Mr.Raghuram, Assistant Professor, NDRK College of Education, Hassan shared the information about study habits and how to prepare for the IAS and KAS examination, eligibility criteria, age limit, number of attempts, marks allotment/distribution, personality test, interviews/viva-voce etc.




At the end of the training programme teacher trainees were given opportunity to ask questions and to clear their doubts. Interaction was fruitful. Both the resource persons were honored by Dr. Nanjundappa .S., Principal JSS Institution of Education, Sakaleshpur. Presidential speech was given by Dr. Nanjundappa .S., Principal JSS Institution of Education, Sakaleshpur.

Dr. Prabhuswamy M., Asst. Prof. /IQAC Co-ordinator, JSS Institute of Education, Sakaleshpur thanked gathering and the resource persons.

12/10/2023

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ANNEXURE 4.4

# Legal Awareness–Assistance Program

**On Tuesday 10.10.2023, JSS Institute of Education, Sakaleshpur, Legal Service Committee and Prosecution Department jointly organized a legal awareness-assistance program as part of International Girl Child Day and Mental Health Day at their compound.** The trainee teachers, Chaithrashree K. A., Sunitha and Niveditha H. P., conducted the program prayer and the dignitaries who came to the program were welcomed by Assistant Professor, Dr. Prabhuswamy M.





Mrs. R. Dhanalakshmi, Senior Civil Judge of Sakaleshpur Taluk and President of Legal Service Committee, inaugurated the program by watering the saplings and spoke about the problems of mental disorders in the present society and the importance of mental health and the mission of the International Day of the Girl Child.





Mrs. Jyothi R.B., a taluk lawyer, wished all the best on International Girl Child Day and gave information about the POCSO Act-2012. She said that the Act is to provide a robust legal framework for the protection of children from offenses of sexual violence, sexual harassment and obscenity. She said that the judiciary will protect the interest of children at every stage.





Another resource person and lawyer, Mr. Shivaprakash spoke about mental health, about the psychological changes caused by the stress of learning in children's lives and the objectives of the Legal Service Committee, and the changes to be made in the society and their need.





Another resource person and lawyer, Mrs. H.D. Parvathy, spoke about the Prevention of Domestic Violence against Girl Child Act-2005 and explained the facilities available to girl child victims of domestic violence. Assistant Public Prosecutor Mrs. Ashvita V. Amin who arrived as the chief guest wished good luck on the occasion of International

Day of the Girl Child and, another Assistant Public Prosecutor Mr. Nagesh G. R. explained the facilities available under the law in his speech.





The program was presided over by Assistant Professor Dr. Dinesh M. K. He delivered the presidential speech. Assistant Professor Sri Nanjundaswamy K. S. did the vote of thanks. Deepa K. S. and Deepthi D., trainee teachers, narrated the program.

**Program Coordinator:** Dr. Prabhuswamy M., Assistant Professor, JSSIE, Sakleshpur.

PRINCIPAL
J.S.S. Institute of Education
P.B. 26, SAKALESHPUR-573 1..
Hassan Dist

P-23

# ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯ

ಕೌಡಳ್ಳಿ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ

# ಸಮುದಾಯ ವಾಸ್ತವ್ಯ ಶಿಬಿರ

# Community Living Camp

## 11 - 13 October 2023





## ಶಿಬಿರ ನಡೆದ ಸ್ಥಳ

### ಮುರಾರ್ಜಿ ವಸತಿ ಶಾಲೆ

ಮರಸುಹೊಸಳ್ಳಿ, ಆಲೂರು ತಾಲ್ಲೂಕು

ಹಾಸನ ಜಿಲ್ಲೆ

# ಸಮುದಾಯ ವಾಸ್ತವ್ಯ ಶಿಬಿರ

ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಆಲೂರು ತಾಲ್ಲೂಕಿನ ಮರಸುಹೊಸಳ್ಳಿ ಗ್ರಾಮದ ಮುರಾರ್ಜಿ ವಸತಿ ಶಾಲೆಯಲ್ಲಿ ಮೂರು ದಿನಗಳ ಸಮುದಾಯ ವಾಸ್ತವ್ಯ ಶಿಬಿರವನ್ನು ದಿನಾಂಕ 11 ಅಕ್ಟೋಬರ್ 2023 ರಿಂದ 13 ಅಕ್ಟೋಬರ್ 2023 ರವರೆಗೆ ನಡೆಸಲಾಯಿತು.

ಬೆಳಗ್ಗೆ 9ಕ್ಕೆ ವಾಸ್ತವ್ಯ ಶಿಬಿರದ ಸ್ಥಳಕ್ಕೆ ಆಗಮಿಸಿದ ನಾಲ್ಕನೇ ಸೆಮಿಸ್ಟರ್ ಪ್ರಶಿಕ್ಷಣಾರ್ಥಿಗಳು ಮೊದಲಿಗೆ ಸ್ಥಳದ ವೀಕ್ಷಣೆ ಮಾಡಿದರು. ವಸತಿ ಶಾಲೆಯಾದ್ದರಿಂದ ಶಿಬಿರಾರ್ಥಿಗಳ ವಸತಿ ವ್ಯವಸ್ಥೆ ಹಾಗೂ ಭೋಜನಾ ವ್ಯವಸ್ಥೆಗೆ ಹಾಗೂ ಇನ್ನಿತರ ಎಲ್ಲಾ ಸೌಲಭ್ಯಗಳನ್ನೊಳಗೊಂಡ ಶಾಲೆಯಾದ್ದರಿಂದ ವಸತಿ ಶಾಲೆಯ ಮಹಿಳಾ ವಸತಿ ನಿಲಯಕ್ಕೆ ಮಹಿಳಾ ಶಿಬಿರಾರ್ಥಿಗಳು ಹಾಗೂ ಪುರುಷ ವಸತಿ ನಿಲಯಕ್ಕೆ ಪುರುಷ ಶಿಬಿರಾರ್ಥಿಗಳನ್ನು ಉಳಿದುಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು.

## ಧ್ವಜಾರೋಹಣ

ಬೆಳಗ್ಗೆ 11 ಗಂಟೆಗೆ ಮಾಸ್ತಿ ತಂಡದ ವತಿಯಿಂದ ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ ಆರ್ ರವರು ಧ್ವಜಾರೋಹಣ ನೆರವೇರಿಸುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿ ಎನ್.ಎಸ್.ಎಸ್ ಶಿಬಿರ ಹಾಗೂ ಸಮುದಾಯ ವಾಸ್ತವ್ಯ ಶಿಬಿರಕ್ಕೂ ಇರುವ ವ್ಯತ್ಯಾಸ ತಿಳಿಸಿ ಶಿಬಿರವನ್ನು ಹೇಗೆ ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸುತ್ತಾ ಶಿಬಿರಕ್ಕೆ ಶುಭ ಹಾರೈಸಿದರು. ಧ್ವಜಾರೋಹಣ ಸಂದರ್ಭದಲ್ಲಿ ಮರಸುಹೊಸಳ್ಳಿ ಗ್ರಾಮದ ಮುರಾರ್ಜಿ ವಸತಿ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಕಾಶ್ ಬಿ.ಹೆಚ್, ಕಂಪ್ಯೂಟರ್ ನಿರ್ವಾಹಕರಾದ ಶ್ರೀ ಚೇತನ್ ಬಿ.ಎ, ಸಹ ಶಿಕ್ಷಕರಾದ ಶ್ರೀ ಲಕ್ಷ್ಮಣ ಬಿ, ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ಹಾಗೂ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ನೌಕರರಾದ ಶ್ರೀ ತಮ್ಮಯ್ಯ ಹೆಚ್.ಬಿ ಹಾಗೂ ಶ್ರೀ ಮಹೇಶ್ ಎಸ್ ಉಪಸ್ಥಿತರಿದ್ದರು.

## ಶಿಬಿರದ ಉದ್ಘಾಟನೆ:

ದಿನಾಂಕ 11 ಅಕ್ಟೋಬರ್ 2023 ರ ಬುಧವಾರ ಬೆಳಗ್ಗೆ 11.30 ಕ್ಕೆ ಕುವೆಂಪು ತಂಡದವರು ಸಿದ್ಧಪಡಿಸಿದ ವೇದಿಕೆಯಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಿತು.



ಆಲೂರು ತಾಲ್ಲೋಕಿನ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ಶ್ರೀಮತಿ ನಿರ್ಮಲಾ ಎಂ.ಸಿ ರವರು ದೀಪ ಬೆಳಗಿಸುವ ಮೂಲಕ ಶಿಬಿರವನ್ನು ಉದ್ಘಾಟಿಸಿ ಶಿಕ್ಷಕರು ಉತ್ತಮ ಸಮಾಜದ ನಿರ್ಮಾತೃಗಳು ಹಾಗೂ ಉತ್ತಮ ಪ್ರಜೆಗಳಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ತಿಳಿಸಿ ಶಿಬಿರದ ಸದುಪಯೋಗ ಪಡಿಸಿಕೊಳ್ಳಿ ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ವಕೀಲರಾದ ಶ್ರೀ ನಾಗರಾಜು ಕೆ.ಜಿ ರವರು ಮಾತನಾಡುತ್ತಾ ನಾವು ವಿವೇಕಾನಂದರ ಆದರ್ಶಗಳನ್ನು ಪಾಲಿಸಿಕೊಳ್ಳಬೇಕು ನಮಗೆ ಎಲ್ಲಾ ವಿದ್ಯಾರ್ಥಿಗಳನ್ನು ಬೆಳೆಸುವ ಘನ ಜವಾಬ್ದಾರಿ ಇದೆ. ಶಿಕ್ಷಕ ವೃತ್ತಿ ಎಲ್ಲಾ ವೃತ್ತಿಗಳಿಗಿಂತಲೂ ಪವಿತ್ರವಾದದ್ದು ಎಂದು ತಿಳಿಸುತ್ತಾ ಇಂದು ಹೆಣ್ಣು ಮಕ್ಕಳ ದಿನವಾಗಿದ್ದು ಅದರ ಮಹತ್ವವನ್ನು ತಿಳಿಸಿದರು.



ಮುಖ್ಯ ಅತಿಥಿಗಳಾಗಿ ಆಗಮಿಸಿದ ಮರಸುಹೊಸಳ್ಳಿ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಕಾಶ್ ಹೆಚ್.ಎಸ್ ರವರು ತಮ್ಮ ಬಿ.ಇಡಿ ಸಂದರ್ಭದಲ್ಲಿ ನಡೆದ ಸಮುದಾಯ ವಾಸ್ತವ್ಯ ಶಿಬಿರದ ಅನುಭವಗಳನ್ನು



ಹಂಚಿಕೊಳ್ಳುತ್ತಾ, ಮುಂದಿನ ದಿನಗಳಲ್ಲಿ ಒಳ್ಳೆಯ ಶಿಕ್ಷಕರಾಗಿ ಶಿಕ್ಷಕ ಹುದ್ದೆಗೆ ತಕ್ಕಂತೆ ಘನತೆಯನ್ನು ಬೆಳೆಸಿಕೊಳ್ಳಬೇಕು, ಶಿಕ್ಷಕರು ತಪ್ಪು ಮಾಡಿದರೆ ಮುಂದಿನ ಸಮುದಾಯವೇ ತಪ್ಪು ಮಾಡಿದಂತೆ, ಆದುದ್ದರಿಂದ ವಿದ್ಯಾರ್ಥಿಗಳನ್ನು ಸರಿಯಾದ ದಾರಿಯಲ್ಲಿ ನಡೆಸುವ ಜವಾಬ್ದಾರಿ ಶಿಕ್ಷಕರಿಗೆ ಇದೆ. ನಮ್ಮ ಜ್ಞಾನವು ನಮ್ಮ ನಡವಳಿಕೆಯಲ್ಲಿ ಪ್ರತಿಬಿಂಬ ಆಗಬೇಕು. ಶಿಕ್ಷಿತರು ಸಮಾಜವನ್ನು ಪರಿವರ್ತನೆ ಮಾಡಬೇಕು. ನಮ್ಮ ಶಿಕ್ಷಣಕ್ಕೆ ಅರ್ಥ ಬರಬೇಕಾದರೆ ಸಮಕಾಲೀನ ಶಿಕ್ಷಣದ ಮಹತ್ವನ್ನು ತಿಳಿಯಬೇಕು ಎಂದು ಹೇಳುತ್ತಾ ಕೃತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ದಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ, ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ, ದ್ವಾಪರಯುಗದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ, ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು ಎಂದು ಅಲ್ಲಮನ ವಚನವನ್ನು ಹೇಳಿ ಕಾಲ ಮತ್ತು ಯುಗಧರ್ಮವನ್ನು ಈಗಿನ ವಿದ್ಯಾರ್ಥಿಗಳ ಮನೋಭಾವವನ್ನು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಕಣತ್ತೂರು ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ಪೃಥ್ವಿ ಜಯರಾಮ್ ರವರು ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು.

ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ರವರು ಶಿಬಿರಾರ್ಥಿಗಳಿಗೆ ಶಿಕ್ಷಕರು ಸಮುದಾಯದೊಂದಿಗೆ ಹೇಗೆ ವರ್ತಿಸಬೇಕೆಂದು ತಿಳಿಸಿ ಶಿಬಿರದ ಯಶಸ್ಸಿಗೆ ನಮ್ಮೆಲ್ಲರ ಸಂಪೂರ್ಣ ಪಾಲ್ಗೊಳ್ಳುವಿಕೆ ಬಹು ಮುಖ್ಯ ಎಂದು ತಿಳಿಸಿದರು. ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ್ ಆರ್ ರವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ಸಮಯ ಪ್ರಜ್ಞೆ ಮತ್ತು ಕರ್ತವ್ಯನಿಷ್ಠೆಯ ಪ್ರಾಮುಖ್ಯತೆಯನ್ನು ಶಿಬಿರಾರ್ಥಿಗಳಿಗೆ ತಿಳಿಸಿದರು.

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ಎಸ್ ರವರು ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ಸಮುದಾಯ ವಾಸ್ತವ್ಯ ಶಿಬಿರದಲ್ಲಿ ಕಲಿತ ಮೌಲ್ಯಗಳನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಳ್ಳುವ ಮಹತ್ವ ತಿಳಿಸುತ್ತಾ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು.

ಪ್ರಾರ್ಥನೆಯನ್ನು ಕುಮಾರಿ ಎಲಿಜಬೆತ್ ಸೋನಿ, ಕುಮಾರಿ ಅಮೃತಾ, ಕುಮಾರಿ ಚಾಂದಿನಿ ನೆರವೇರಿಸಿ ಕುಮಾರಿ ಸುನಿತ ರವರು ನೆರೆದಿದ್ದ ಎಲ್ಲರನ್ನೂ ಸ್ವಾಗತಿಸಿದರು. ಕುಮಾರಿ ಅಮೃತ ಎನ್.ಎಂ ರವರು ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನಿರೂಪಿಸಿದರು. ಅಂತಿಮವಾಗಿ ಕುಮಾರಿ ಅಂಜಲಿ ಎನ್.ಟಿ ರವರು ನೆರೆದಿದ್ದ ಎಲ್ಲರನ್ನೂ ಹೃದಯಪೂರ್ವಕವಾಗಿ ವಂದಿಸಿದರು. ಉದ್ಘಾಟನಾ ಸಂದರ್ಭದಲ್ಲಿ ವಕೀಲರ ಸಂಘದ ಕಾರ್ಯದರ್ಶಿ ಶ್ರೀ ಸುರೇಶ್ ಆರ್.ಬಿ, ಶಿಬಿರದ ಸಹ ಸಂಚಾಲಕರಾದ ಶ್ರೀ ತಮ್ಮಯ್ಯ ಹೆಚ್.ಬಿ, ಸಂಸ್ಥೆಯ ನೌಕರರಾದ ಶ್ರೀ ಮಹೇಶ್ ರವರು ಉಪಸ್ಥಿತರಿದ್ದರು.

## ವಿಶೇಷ ಉಪನ್ಯಾಸ

ಮಧ್ಯಾಹ್ನ 3.30ಕ್ಕೆ ಶಿಬಿರಾರ್ಥಿಗಳಿಗೆ **"ಪ್ರಸ್ತುತ ಕಾಲಘಟ್ಟದಲ್ಲಿ ಸಮುದಾಯದೊಡನೆ ಶಿಕ್ಷಕನ ಪಾತ್ರ"** ಎಂಬ ವಿಷಯದ ಕುರಿತಾಗಿ ಆಲೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ಲೋಹಿತ್ ಅಗಸರಹಳ್ಳಿ ರವರಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಗಿತ್ತು.





ಉಪನ್ಯಾಸಕರಾಗಿ ಆಗಮಿಸಿದ ಶ್ರೀ ಲೋಹಿತ್ ಅಗಸರಹಳ್ಳಿ ರವರು ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ಶಿಕ್ಷಕರ ಪಾತ್ರವು ಜ್ಞಾನವನ್ನು ನೀಡುವುದಲ್ಲದೆ ವಿದ್ಯಾರ್ಥಿಗಳ ಗುರಿಗಳನ್ನು ಸಾಧಿಸಲು ವಿದ್ಯಾರ್ಥಿಗಳಿಗೆ ಸಲಹೆ, ಪ್ರೇರಣೆ ಮತ್ತು ಮಾರ್ಗದರ್ಶನ ನೀಡುವುದು ಅತ್ಯವಶ್ಯಕವಾಗಿದೆ, ಸಮುದಾಯವು ಶಿಕ್ಷಕನಿಂದ ಬಹಳಷ್ಟನ್ನು ಬಯಸುತ್ತದೆ ಅವೆಲ್ಲವನ್ನೂ ಪೂರೈಸುವ ಸಾಮಾರ್ಥ್ಯ ಪ್ರತಿ ಶಿಕ್ಷಕನಿಗೆ ಇರಬೇಕಾಗಿದೆ. ಒಬ್ಬ ಶಿಕ್ಷಕ ಶಿಕ್ಷಕನಾಗಿರದೆ ಇಡೀ ಗ್ರಾಮದ ಅಭ್ಯುದಯಕ್ಕೆ ಸಹಕರಿಸುವ ರೀತಿಯಲ್ಲಿ ಬದಲಾಗಬೇಕು. ಮಕ್ಕಳಲ್ಲಿ ಕಲಿಕೆಯನ್ನು ಉದ್ದೀಪಿಸುವ ಮಾಂತ್ರಿಕನಾಗಿರಬೇಕು. ನಿತ್ಯವೂ ನಿರಂತರವಾಗಿ ಕಲಿಯುವ ಮೂಲಕ ಮಕ್ಕಳ ಕಲಿಕೆಯನ್ನೇ ತನ್ನ ಏಕೈಕ ಕಾಯಕವನ್ನಾಗಿಸಿಕೊಂಡು ಮಕ್ಕಳ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸರ್ವತೋಮುಖ ಬೆಳವಣಿಗೆಯ ಹರಿಕಾರನಾಗಿರಬೇಕು ಎಂದು ತಿಳಿಸಿದರು.

ಉಪನ್ಯಾಸ ಮುಗಿದ ನಂತರ ಶ್ರೀಯುತರಿಗೆ ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ರವರು ನೆನಪಿನ ಕಾಣಿಕೆ ನೀಡುವ ಮೂಲ ಗೌರವ ಸಮರ್ಪಣೆ ನೆರವೇರಿಸಿಕೊಟ್ಟರು. ಶ್ರೀಯುತರನ್ನು ಶಿಬಿರಾರ್ಥಿ ಆಂಜನೇಯ ರವರು ಪರಿಚಯಿಸಿ, ಶಿಬಿರಾರ್ಥಿ ಕುಮಾರಿ ಶಿಲ್ಪ ಹೆಚ್.ಕೆ ರವರು ನಿರೂಪಿಸಿದರು.

## ಕ್ಷೇತ್ರ ಭೇಟಿ

ಸಂಜೆ 4ಕ್ಕೆ ಶಿಬಿರಾರ್ಥಿಗಳಿಗೆ ವಿಭಿನ್ನ ಪರಿಸರಕ್ಕೆ ಹೊಂದಿಕೊಳ್ಳುವುದು ಹಾಗೂ ಹೊಸ ಪ್ರದೇಶಗಳ ಪರಿಚಯಿಸುವ ದೃಷ್ಠಿಯಿಂದ ಆಲೂರು ಸಮೀಪದ ಮರಸುಹೊಸಹಳ್ಳಿ ಗ್ರಾಮದ ಸಮೀಪದ ಶ್ರೀ ವಿಜಯದುರ್ಗ ಕ್ಷೇತ್ರಕ್ಕೆ ಭೇಟಿ ನೀಡಲಾಯಿತು. ಶಿಬಿರ ಸ್ಥಾನದಿಂದ ಸುಮಾರು ಒಂದುವರೆ ಕಿಲೋ ಮೀಟರ್ ದೂರವಿರುವ ಶ್ರೀ ವಿಜಯದುರ್ಗ ಕ್ಷೇತ್ರಕ್ಕೆ ಶಿಬಿರಾರ್ಥಿಗಳು ಕಾಲ್ನಡಿಗೆಯಲ್ಲಿ ನಡೆದು ತಲುಪಿದ ತಕ್ಷಣ ಸುಂದರವಾಗಿ ಕೆತ್ತಲಾದ ಕಮಾನು ಮಾರ್ಗವು ಅಷ್ಟಭುಜಾಕೃತಿಯ ಪುರುಷಾರ್ಥ ಯಾಗ ಮಂಟಪ ಶಿಬಿರಾರ್ಥಿಗಳನ್ನು ಕೈಬೀಸಿ ಕರೆದಂತಿದ್ದವು.

ಶ್ರೀಕ್ಷೇತ್ರದ ಗರ್ಭಗುಡಿಯಲ್ಲಿ ದುರ್ಗಾ ದೇವಿಯ ಎರಡು ರೂಪಗಳ ಕೆತ್ತನೆಯ ದೇವತೆಗಳನ್ನು ನೋಡಿ ಸಂತೋಷಪಟ್ಟರು. ಈ ಕ್ಷೇತ್ರಕ್ಕೆ ನ್ಯಾಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದ ಸಾಂತ್ವಾನ ಕೋರಿ ಬಹಳಷ್ಟು ಭಕ್ತರು ಇಲ್ಲಿಗೆ ಆಗಮಿಸುತ್ತಾರೆಂದು ತಿಳಿಯಿತು. ಶಿಬಿರಾರ್ಥಿಗಳು ಗರ್ಭಗುಡಿಯ ಮುಂಭಾಗದಲ್ಲಿ ಭಜನೆ ಮಾಡುವ ಮೂಲಕ ದೇವರ ಕೃಪೆ ಆರೋಗ್ಯ ಭಾಗ್ಯ ಸುಖ ಶಾಂತಿ ನೆಮ್ಮದಿ ಪ್ರಾಪ್ತಿಯಾಗಲೆಂದು ಪ್ರಾರ್ಥಿಸಿದರು.



## ಸಾಂಸ್ಕೃತಿಕ ಕಾರ್ಯಕ್ರಮಗಳು

ಸಂಜೆ 7.30ಕ್ಕೆ ಶಿಬಿರದ ಆವರಣದಲ್ಲಿ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರಿತು. ಶಿಬಿರಾರ್ಥಿಗಳು ಕೇವಲ ಪಠ್ಯ ವಿಷಯಕ್ಕಷ್ಟೇ ಸೀಮಿತಗೊಳಿಸದೆ ಗ್ರಾಮೀಣ ಜನರ ಬದುಕು, ಆಚಾರ-ವಿಚಾರ, ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವ ಕೆಲಸವನ್ನು ಮಾಡಿದರು. ಈ ಸಂದರ್ಭದಲ್ಲಿ ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಮೌನ ಭೋಜನ

ನಿತ್ಯವೂ ಊಟ ಹಾಗೂ ತಿಂಡಿಯ ಸಂದರ್ಭದಲ್ಲಿ ಅನ್ನಪೂರ್ಣೆ ಸದಾಪೂರ್ಣೆ ಶಂಕರ ಪ್ರಾಣ ವಲ್ಲಭೆ! ಜ್ಞಾನ ವೈರಾಗ್ಯ ಸಿಧ್ಯರ್ಥಂ ಭಿಕ್ಷಾಂ ದೇಹಿ ಚ ಪಾರ್ವತಿ॥ ಎಂಬ ಭೋಜನಾ ಮಂತ್ರದೊಂದಿಗೆ ಪ್ರಾರಂಭಿಸಲಾಗುತ್ತಿತ್ತು.



ಮೊದಲ ದಿನದ ರಾತ್ರಿಯ ಭೊಜನವನ್ನು ಗೋಕಾಕ್ ತಂಡದವರು ಮೌನ ಭೋಜನದ ಮೂಲಕ ನೆರವೇರಿಸಿಕೊಟ್ಟರು. ಮೌನ ಭೋಜನದಲ್ಲಿ ಇದು ಬೇಕು, ಇದು ಬೇಡ.. ಎಂದು ಕೈ ಸನ್ನೇಯಲ್ಲೇ ಹೇಳಿ ಹಾಕಿಸಿಕೊಳ್ಳುವ, ಬೇಡವೆನ್ನುವ ವಿಧಾನವಂತೂ ಖುಷಿಕೊಡುತ್ತಿತ್ತು. ಇಂತಹ ಮೌನಭೋಜನ ಉಣ್ಣುವವರಿಗಷ್ಟೇ ಅಲ್ಲ ಬಡಿಸುವವರಿಗೂ ಸವಾಲು ಕೂಡ ಹೌದು, ಆ ಸವಾಲನ್ನು ಗೋಕಾಕ್ ತಂಡದವರು ಅಚ್ಚುಕಟ್ಟಾಗಿ ನಿಭಾಯಿಸಿದರು. ವಿಶಿಷ್ಟ ಮೌನ ಭೋಜನವನ್ನು ಸವಿದ ಶಿಬಿರಾರ್ಥಿಗಳು ಸಂತಸ ವ್ಯಕ್ತಪಡಿಸಿದರು.

## ಅವಲೋಕನ

ರಾತ್ರಿ ಮಲಗುವ ಮುನ್ನ ಇಂದು ನಡೆದ ಎಲ್ಲಾ ಕಾರ್ಯಕ್ರಮಗಳ ಕುರಿತಾಗಿ ಅವಲೋಕಿಸಿ ಯಾವುದು ಸರಿ ಯಾವುದು ಬದಲಾಯಿಸಿಕೊಂಡರೆ ಇನ್ನೂ ಉತ್ತಮವಾಗಿರುತ್ತದೆ ಹಾಗೂ ನಾಳೆಯ ಇಡೀ ದಿನದ ಯೋಜನೆ ಹೇಗಿರಬೇಕೆಂಬುದನ್ನು ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ ಆರ್ ಹಾಗೂ ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ರವರು ತಿಳಿಸಿದರು. ಅವಲೋಕನದಿಂದಾಗಿ ಇಂದಿನ ತಪ್ಪುಗಳು ನಾಳೆ ಮರುಕಳಿಸದಂತೆ ಎಚ್ಚರವಹಿಸಲು ಸಹಕರಿಸುತ್ತವೆಂದು ತಿಳಿಸಿದರು.

# ಎರಡನೇ ದಿನ (12 ಅಕ್ಟೋಬರ್ 2023ರ ಗುರುವಾರ)

## ಉತ್ಥಾನ್ನ:

ನಿತ್ಯ ಬೆಳಗ್ಗೆ 5ಕ್ಕೆ ಎಲ್ಲಾ ಶಿಬಿರಾರ್ಥಿಗಳನ್ನು ಎಚ್ಚರಿಸುವ ಕೆಲಸ ನಡೆಯುತ್ತಿತ್ತು.

## ಧ್ವಜಾರೋಹಣ



ಎರಡನೇ ದಿನದ ಧ್ವಜಾರೋಹಣವನ್ನು ಮುರಾರ್ಜಿ ಶಾಲೆಯ ಶಿಕ್ಷಕರಾದ ಶ್ರೀ ಲಕ್ಷ್ಮಣ ಬಿ ರವರು ನೆರವೇರಿಸುವ ಮೂಲಕ ಶಿಕ್ಷಕನಿಗೆ ಇರಬೇಕಾಗದ ಶಿಸ್ತಿನ ಕುರಿತಾಗಿ ಚಿಂತನಾ ಕಾರ್ಯಕ್ರಮವನ್ನು ನೆರವೇರಿಸಿದರು.

ಇಂದಿನ ಧ್ವಜಾರೋಹಣ ಸಿದ್ದತೆಯನ್ನು ಕುವೆಂಪು ತಂಡದವರು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿದರು. ಧ್ವಜಾರೋಹಣ ಸಂದರ್ಭದಲ್ಲಿ ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ ಆರ್, ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ಹಾಗೂ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದ ನೌಕರರಾದ ಶ್ರೀ ತಮ್ಮಯ್ಯ ಹೆಚ್.ಬಿ ಹಾಗೂ ಶ್ರೀ ಮಹೇಶ್ ಎಸ್ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

## ಭಜನೆ:



ಸಮುದಾಯ ವಾಸ್ತವ್ಯ ಶಿಬಿರದಲ್ಲಿ ನಿತ್ಯ ಬೆಳಗ್ಗೆ 6.30 ರಿಂದ 7 ರವರೆಗೆ ಸರ್ವಧರ್ಮ ಭಜನಾ ಕಾರ್ಯಕ್ರಮ ನಡೆಯಿತು.




ನಿತ್ಯ ಭಜನೆಯನ್ನು ಮುರಾರ್ಜಿ ವಸತಿ ಶಾಲೆಯ ಶಿಕ್ಷಕರಾದ ಶ್ರೀ ಲಕ್ಷ್ಮಣ ಬಿ ರವರು ಶಿಬಿರಾರ್ಥಿಗಳಿಗೆ ಹೇಳಿಕೊಡುವ ಮುನ್ನ ಭಜನೆಯ ಪ್ರಾಮುಖ್ಯತೆಯನ್ನು ವಿವರಿಸುತ್ತಾ, ಭಕ್ತಿಯಿಂದ ನಾವು ಭಗವಂತನ ಹಾಡುಗಳನ್ನು ಹೇಳಿದರೆ ಭಗವಂತ ಅತ್ಯಂತ ಸಂತೋಷದಿಂದ ಕುಳಿತು ಕೇಳುತ್ತಾನೆ. ನಾವು ಕುಳಿತುಕೊಂಡು ಭಜಿಸಿದರೆ ಭಗವಂತ ನಿಂತು ಕೇಳುತ್ತಾನೆ. ನಿಂತು ಹಾಡಿದರೆ ಭಗವಂತ ಸಂತೋಷಪಟ್ಟು ನಲಿದು ಕುಣಿಯುತ್ತಾನೆ ಅಂದರೆ ಭಗವಂತನನ್ನು ತೃಪ್ತಿಪಡಿಸಲು ಇರುವ ಏಕೈಕ ಮಾರ್ಗವೇ ಭಜನೆ ಎಂದು ಹೇಳುತ್ತಾ ಸರ್ವಧರ್ಮ ಭಜನೆ ಮಾಡಿಸಿದರು. ನಿತ್ಯ ಭಜನೆ ಸಂದರ್ಭದಲ್ಲಿ ಶ್ರೀ ಲಕ್ಷ್ಮಣ್ ಬಿ ರವರೊಂದಿಗೆ ಶಿಬಿರಾರ್ಥಿ ಶಿಫಾ, ಎಲಿಜಬೆತ್ ಸೋನಿ ಮತ್ತು ದೀಪ ರವರು ಹೇಳಿಕೊಡುವ ಮೂಲಕ ಸಹಕರಿಸಿದರು.

## ವ್ಯಾಯಾಮ:

ಶಿಬಿರದಲ್ಲಿ ನಿತ್ಯ ಬೆಳಗ್ಗೆ 7 ರಿಂದ 7.45 ರವರೆಗೆ ಶಿಬಿರಾರ್ಥಿಗಳಿಗೆ ಮುರಾರ್ಜಿ ವಸತಿ ಶಾಲೆಯ ಶಿಕ್ಷಕರಾದ ಶ್ರೀ ಲಕ್ಷ್ಮಣ ಬಿ ರವರು ನಾನಾ ಸರಳ ಯೋಗಾಸನಗಳನ್ನು ಪ್ರಾತ್ಯಕ್ಷಿಕೆಯ ಮೂಲಕ ಪರಿಚಯಿಸಿದರು. ಯೋಗಾಸನಗಳನ್ನು ಮಾಡಿಸುವ ಸಂದರ್ಭದಲ್ಲಿ ಯೋಗದ ಮಹತ್ವ ಹಾಗೂ ಪ್ರತಿ ಆಸನಗಳ ಉಪಯೋಗ ಕುರಿತಾಗಿ ವಿವರಿಸಿದರು.







ಬೆಳಗ್ಗೆ 7.45 ರಿಂದ 8 ರವರೆಗೆ ಶಿಬಿರಾರ್ಥಿಗಳಿಗೆ ಮುರಾರ್ಜಿ ವಸತಿ ಶಾಲೆಯ ದೈಹಿಕ ಶಿಕ್ಷಕರಾದ ಕುಮಾರಿ ಕಾವ್ಯ ರವರು ಏರೋಬಿಕ್ಸ್ ಡ್ಯಾನ್ಸ್ ಮಾಡಿಸಿದರು. ಏರೋಬಿಕ್ಸ್ ಡ್ಯಾನ್ಸ್ ಮಾಡಿಸುವ ಮುನ್ನ ಅದರ ವಿಶೇಷತೆ ತಿಳಿಸುತ್ತಾ ನಿಮ್ಮ ಚಲನೆಗಳ ವೇಗ ಮತ್ತು ಲಯವನ್ನು ನಿರ್ಧರಿಸುವ ವೇಗದ ಗತಿಯ ಸಂಗೀತಕ್ಕೆ ತಾಲೀಮುಗಳನ್ನು ಸಾಮಾನ್ಯವಾಗಿ ಹೊಂದಿದ್ದು ನಿಮ್ಮ ಹೃದಯ ಬಡಿತವನ್ನು ಹೆಚ್ಚಿಸುವ ಮೂಲಕ ನೀವು ಸುಡುವ ಕ್ಯಾಲೋರಿಗಳ ಪ್ರಮಾಣವನ್ನು ಅತ್ಯುತ್ತಮವಾಗಿಸಲು ಸಹಕರಿಸುತ್ತದೆ ಎಂದು ತಿಳಿಸುತ್ತಾ ಪ್ರಾತ್ಯಕ್ಷಿಕೆ ಮೂಲಕ ಏರೋಬಿಕ್ಸ್ ಹೇಳಿಕೊಟ್ಟರು.

## ಸ್ವಚ್ಛತೆ


ಶಿಬಿರದಲ್ಲಿ ಎರಡನೇ ದಿನ ಹಾಗೂ ಮೂರನೇ ದಿನ ಬೆಳಗ್ಗೆ 8 ರಿಂದ 9 ರವರೆಗೆ ಸ್ವಚ್ಛತಾ ಕಾರ್ಯವನ್ನು ಆಯೋಜಿಸಲಾಗಿತ್ತು. ಶಿಬಿರಾರ್ಥಿಗಳಿಗೆ ತಾವು ವಾಸಿಸುವ ಸ್ಥಳದ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛತೆಯಿಂದ ಹೇಗೆ ಇರಿಸಿಕೊಳ್ಳಬೇಕೆಂಬುದರ ಮಹತ್ವ ಅರಿಯುವ ದೃಷ್ಟಿಯಿಂದ ಎಲ್ಲಾ ಶಿಬಿರಾರ್ಥಿಗಳನ್ನು ವಿವಿಧ ತಂಡಗಳನ್ನಾಗಿ ವಿಂಗಡಿಸಿ ಬೇರೆ ಬೇರೆ ಪ್ರದೇಶಗಳನ್ನು ಸ್ವಚ್ಛತೆ ಮಾಡುವ ಜವಾಬ್ದಾರಿಯನ್ನು ನಿಯೋಜಿಸಲಾಗಿತ್ತು. ಸ್ವಚ್ಛತಾ ಸಂದರ್ಭದಲ್ಲಿ ಶಿಬಿರಾರ್ಥಿಗಳು ಹಣ್ಣಿನ ಗಿಡಗಳನ್ನು ನೆಡುವ ಮೂಲಕ ಸಮುದಾಯ ವಾಸ್ತವ್ಯ ಶಿಬಿರದಲ್ಲಿ ತಮ್ಮ ನೆನಪನ್ನು ಉಳಿಸುವ ಕಾರ್ಯವನ್ನು ಮಾಡಿದರು.





## ಸಂವಾದ ಕಾರ್ಯಕ್ರಮ

ಎರಡನೇ ದಿನದ ಮೊದಲ ವೇದಿಕೆ ಕಾರ್ಯಕ್ರಮ ಸಂವಾದದ ಮೂಲಕ ಪ್ರಾರಂಭವಾಯಿತು. **"ಶಿಕ್ಷಕರಿಂದ ಪೋಷಕರ ನಿರೀಕ್ಷೆಗಳು"** ಎಂಬ ವಿಷಯದ ಕುರಿತಾಗಿ ಕಾಫಿ ಬೆಳೆಗಾರರು ಹಾಗೂ ಚಿಂತಕರಾದ ಶ್ರೀ ಯಡೇಹಳ್ಳಿ ಮಂಜುನಾಥ್




ರವರು ನಡೆಸಿಕೊಟ್ಟರು. ಇತ್ತೀಚೆಗಿನ ಶಿಕ್ಷಣದಲ್ಲಿ ಪೋಷಕರು ಶಿಕ್ಷಕರಿಂದ ಬಹಳಷ್ಟನ್ನು ನಿರೀಕ್ಷಿಸುತ್ತಾರೆ. ತಮ್ಮ ಮಗುವಿನ ಸರ್ವತೋಮುಖ ಅಭಿವೃದ್ಧಿ ಶಿಕ್ಷಕರಿಂದ ಮಾತ್ರ ಸಾಧ್ಯ ಎಂದು ನಂಬಿರುವ ಪೋಷಕರು ವಿದ್ಯಾರ್ಥಿಯ ಮಾನಸಿಕ ಬುದ್ಧಿಮಟ್ಟ ಯೋಚಿಸದೆ ಎಲ್ಲಾ ಶಿಕ್ಷಕರಿಂದ ಸಾಧ್ಯ ಎಂಬ ಆಲೋಚನೆಯಲ್ಲಿರುತ್ತಾರೆ ಎಂದು ತಿಳಿಸುತ್ತಾ ಪೋಷಕರಾದ ನಮ್ಮಗಳ ಪಾತ್ರ ಏನು ಎಂಬುದನ್ನು ಎಲ್ಲರೂ ಮರೆತಂತಿದೆ ಎಂದು ತಿಳಿಸಿದರು. ಪ್ರಸ್ತುತ ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯಗಳ ಕುರಿತಾಗಿ ಚರ್ಚಿಸಿದರು. ಕೊನೆಯಲ್ಲಿ ಆಯ್ದ ಕೆಲವು ಶಿಬಿರಾರ್ಥಿಗಳು ವಿಷಯಕ್ಕೆ ಪೂರಕವಾಗುವಂತಹ ಒಂದಷ್ಟು ಪ್ರಶ್ನೆಗಳನ್ನು ಕೇಳುವ ಮೂಲಕ ಸಂವಾದ ಕಾರ್ಯಕ್ರಮವು ಅಚ್ಚುಕಟ್ಟಾಗಿ ನಡೆಯಿತು.

ಸಂವಾದ ಕಾರ್ಯಕ್ರಮಕ್ಕೆ ಆಗಮಿಸಿದ ಶ್ರೀ ಯಡೇಹಳ್ಳಿ ಮಂಜುನಾಥ್ ರವರನ್ನು ಶಿಬಿರಾರ್ಥಿ ಅಕ್ಷತಾ ಸಿ.ಎಸ್ ರವರು ಪರಿಚಯಿಸಿದರು ಹಾಗೂ ಯಡೇಹಳ್ಳಿ ಮಂಜುನಾಥ್ ರವರ ಅಪೇಕ್ಷೆಯ ಮೇರೆಗೆ ಹಾಗೂ ಪ್ರಸ್ತುತ ಶಿಕ್ಷಕರಾದ ನಿಮ್ಮಗಳಿಂದ ಪೋಷಕರು ನಿರೀಕ್ಷಿಸಬಹುದಾದ ಉದಾಹರಣೆಗೆ ಅಬ್ರಾಹಂ ಲಿಂಕನ್ ರವರು ತಮ್ಮ ಮಗನ ಶಾಲೆಯ ಶಿಕ್ಷಕರಿಗೆ ಏನನ್ನು ಕಲಿಸಬೇಕೆಂದು ಬರೆದ ಪತ್ರವನ್ನು ಶಿಬಿರಾರ್ಥಿ ಅಕ್ಷತಾ ಸಿ.ಎಸ್ ರವರು ಓದಿದರು. ಶ್ರೀಯುತರಿಗೆ ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ ಆರ್ ರವರು ಗೌರವ ಸಮರ್ಪಣೆ ನೆರವೇರಿಸಿದರು.

## ಉಪನ್ಯಾಸ




ಮಧ್ಯಾಹ್ನ 2.30ಕ್ಕೆ ಹಾಸನದ ಕೇಂದ್ರೀಯ ವಿದ್ಯಾಲಯದ ಮನೋವಿಜ್ಞಾನಿಗಳಾದ ಶ್ರೀ ರಘು ಪ್ರಸಾದ್ ಕೆ.ವಿ ರವರು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಮಸ್ಯೆಗಳು ಮತ್ತು ಸವಾಲುಗಳು ವಿಷಯದ ಕುರಿತಾಗಿ ಉಪನ್ಯಾಸ ನೀಡಿದರು. ಶ್ರೀಯುತರು ಶಿಬಿರಾರ್ಥಿಗಳ ಕುರಿತು ಮಾತನಾಡುತ್ತಾ ಮಕ್ಕಳಲ್ಲಿ ಅವಧಾನವನ್ನು ಕೇಂದ್ರಿಕರಿಸುವುದರ ಸಲುವಾಗಿ ಅನುಸರಿಸುವ ಹಲವಾರು ಮಾರ್ಗೋಪಾಯಗಳನ್ನು ತಿಳಿಸಿದರು. ಹಾಗೂ ಮಕ್ಕಳಲ್ಲಿ ಕಂಡುಬರುವ ಹಲವಾರು ಮನೋವೈಜ್ಞಾನಿಕ ಸಮಸ್ಯೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಶ್ರೀಯುತರನ್ನು ಶಿಬಿರಾರ್ಥಿ ಅಕ್ಷತ ಸಿ.ಎಸ್ ರವರು ಪರಿಚಯಿಸಿದರು ಹಾಗೂ ಶಿಬಿರದ ಸಹ ಸಂಚಾಲಕರಾದ ಶ್ರೀ ತಮ್ಮಯ್ಯ ಹೆಚ್.ಬಿ ರವರು ನೆನಪಿನ ಕಾಣಿಕೆ ನೀಡುವ ಮೂಲಕ ಗೌರವಿಸಿದರು.


## ಮನೋವೈಜ್ಞಾನಿಕ ಆಟಗಳು



ಸಂಜೆ 4.30ಕ್ಕೆ ಮರಸು ಹೊಸಳ್ಳಿ ಮುರಾರ್ಜಿ ವಸತಿ ಶಾಲೆಯ ಸಹ ಶಿಕ್ಷಕರಾದ ಶ್ರೀ ಲಕ್ಷ್ಮಣ ಬಿ ರವರು ಮನೋವೈಜ್ಞಾನಿಕ ಆಟಗಳನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಿಕೊಟ್ಟರು.



ಆಟಗಳನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಿಕೊಡುತ್ತಾ ಮನೋವೈಜ್ಞಾನಿಕ ಆಟದಿಂದ ಮಕ್ಕಳ ದೈಹಿಕ, ಮಾನಸಿಕ ಆರೋಗ್ಯವನ್ನು ಹೇಗೆ ಸುಸ್ಥಿತಿಯಲ್ಲಿಡಬಹುದು ಹಾಗೂ ಬೇರೆ ಮಕ್ಕಳೊಡನೆ ಬೆರೆಯುವುದನ್ನು ಕಲಿಯುವುದಲ್ಲದೆ ಮಕ್ಕಳ ಏಕಾಗ್ರತೆ, ಸೃಜನಶೀಲತೆ, ಬುದ್ಧಿಮತ್ತೆ – ಈ ಎಲ್ಲದರ ವಿಕಾಸಕ್ಕೆ ಈ ಆಟಗಳೇ ಪೂರಕ ಎಂದು ತಿಳಿಸುತ್ತಾ, ಈ ಮನೋವೈಜ್ಞಾನಿಕ ಆಟಗಳಿಂದ ಮಕ್ಕಳು ಸಂಭ್ರಮಿಸುತ್ತಾರೆ, ಖುಷಿಯಿಂದಿರುತ್ತಾರೆ,



ಕುಣಿದು ಕುಪ್ಪಳಿಸಿ 'ಈ ಕ್ಷಣವಷ್ಟೇ ಸತ್ಯ' ಎಂಬಂತೆ ವರ್ತಮಾನದಲ್ಲಿರುತ್ತಾರೆ ಹಾಗೂ ಈ ಆಟಗಳು ಬರೀ ಆಟವಾಗಿರದೆ ಪಾಠವೂ ಹೌದು ಎಂದು ತಿಳಿಸುತ್ತಾ ಮಂಡಲ ಪರದಿ ಮೇಲೆ ಆಟ, ಮಂಡಲದ ಒಳಗಡೆ ಆಟ, ತತಿ ಆಟ, ಅಭಿಮುಖ ಆಟ, ದಂಡ ಬಳಸಿ ಆಡುವ ಆಟ, ಮೂಟೆ ಹೊರುವುದು, ಕೋಟೆ ಯುದ್ಧ ಎಂಬಿತ್ಯಾದಿ ಆಟಗಳನ್ನು ಆಡಿಸಿದರು.

## ಶಿಬಿರಾಗ್ನಿ



ಹಾಸನದ ಸ್ಕೌಟ್ಸ್ ಅಂಡ್ ಗೈಡ್ಸ್ ತಂಡದ ಮುಖ್ಯಸ್ಥರಾದ ಶ್ರೀ ಗಿರೀಶ್ ಆರ್.ಜಿ ರವರ ಸಾರಥ್ಯದಲ್ಲಿ ಶಿಬಿರಾರ್ಥಿಗಳಿಗೆ ಸಂಜೆ 8 ರಿಂದ 9 ರವರೆಗೆ ಶಿಬಿರಾಗ್ನಿಯನ್ನು ಆಯೋಜಿಸಲಾಗಿತ್ತು.

ಶ್ರೀ ಗಿರೀಶ್ ಆರ್.ಜಿ ರವರು ಶಿಬಿರಾಗ್ನಿಯ ಮಹತ್ವವನ್ನು ತಿಳಿಸುತ್ತಾ, ಶಿಬಿರದಲ್ಲಿ ಅಗ್ನಿದೇವನನ್ನು ಆಹ್ವಾನಿಸುವ ಹಾಗೂ ಆ ಮೂಲಕ ದುಷ್ಟ ಶಕ್ತಿಗಳ ನಿರ್ಮೂಲನೆಯ ಕುರಿತಾಗಿ ಸಂದೇಶ ಸಾರುವ ಹಾಗೂ ಕಾಡು ಜನರು ಹೇಗೆ ಬೆಂಕಿಯನ್ನು ಆವಿಷ್ಕರಿಸಿದರು

ಎಂದು ತಿಳಿಸಿಕೊಟ್ಟರು. ಇದೇ ಸಂದರ್ಭದಲ್ಲಿ ನಿಗೂಢವಾಗಿ ಅಗ್ನಿ ಒತ್ತಿಕೊಳ್ಳುವುದನ್ನು ಕಂಡು ಎಲ್ಲಾ ಶಿಬಿರಾರ್ಥಿಗಳು ನಿಬ್ಬೆರಗಾದರು. ಇದೇ ಸಂದರ್ಭದಲ್ಲಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಶ್ರೀ ಕುಮಾರಸ್ವಾಮಿ ರವರು ಉಪಸ್ಥಿತರಿದ್ದರು.




## ದೀಪ ಭೋಜನ

ಇಂದು ರಾತ್ರಿ 10ಕ್ಕೆ ಮಣ್ಣಿನ ದೀಪದ ಬೆಳಕಿನಿಂದ ಊಟ ಸವಿದಿದ್ದು ವಿಶೇಷವಾಗಿತ್ತು. ಮಾಸ್ತಿ ತಂಡದವರು ಪ್ರತಿ ಶಿಬಿರಾರ್ಥಿಗಳ ಮುಂದೆ ಮಣ್ಣಿನ ದೀಪವನ್ನು ಇರಿಸಿ ವಿಶೇಷ ಊಟಕ್ಕೆ ವ್ಯವಸ್ಥೆ ಮಾಡಿದ್ದರು.






# ಮೂರನೇ ದಿನ (13 ಅಕ್ಟೋಬರ್ 2023ರ ಶುಕ್ರವಾರ)

## ಧ್ವಜಾರೋಹಣ

ಮೂರನೇ ದಿನದ ಧ್ವಜಾರೋಹಣವನ್ನು ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ನಂಜುಂಡಸ್ವಾಮಿ ಕೆ.ಎಸ್ ರವರು ನೆರವೇರಿಸುವ ಮೂಲಕ ಶಿಕ್ಷಕನಿಗೆ ಇರಬೇಕಾಗದ ತಾಳ್ಮೆ ಮತ್ತು ಸಂಯಮದ ಕುರಿತಾಗಿ ಕಿರು ಕಥೆ ಹೇಳುವ ಮೂಲಕ ಚಿಂತನಾ ಕಾರ್ಯಕ್ರಮವನ್ನು ನೆರವೇರಿಸಿದರು.

ಇಂದಿನ ಧ್ವಜಾರೋಹಣ ಸಿದ್ದತೆಯನ್ನು ಬೇಂದ್ರೆ ತಂಡದವರು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿದರು. ಧ್ವಜಾರೋಹಣ ಸಂದರ್ಭದಲ್ಲಿ ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ ಆರ್, ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ಹಾಗೂ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ನೌಕರರಾದ ಶ್ರೀ ತಮ್ಮಯ್ಯ ಹೆಚ್.ಬಿ ಹಾಗೂ ಶ್ರೀ ಮಹೇಶ್ ಎಸ್ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

## ಸಮಾರೋಪ ಸಮಾರಂಭ

ಶಿಬಿರದ ಅಂತಿಮ ದಿನವಾದ 13 ಅಕ್ಟೋಬರ್ 2023 ರ ಶುಕ್ರವಾರ ಬೆಳಗ್ಗೆ 10.30ಕ್ಕೆ ಸಮಾರೋಪ ಸಮಾರಂಭ ನಡೆಯಿತು. ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ರಾಜಶೇಖರ ಬಿ.ಎ ಹಾಗೂ ವಿಷಯ ಪರಿವೀಕ್ಷಕರಾದ ಶ್ರೀ ಚನ್ನಬಸಪ್ಪ ರವರು ಆಗಮಿಸಿದರು.





ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ರಾಜಶೇಖರ ಬಿ.ಎ ರವರು ಮಾತನಾಡುತ್ತಾ ಶಿಕ್ಷಕರುಗಳಿಗೆ ಪ್ರಮಾಣ ಪತ್ರದ ಜೊತೆಯಲ್ಲಿ ಜ್ಞಾನವನ್ನು ವೃದ್ಧಿಸಿಕೊಳ್ಳುವ ಕಲೆ ಇರಬೇಕು. ಪ್ರಸ್ತುತ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿಷಯದ ಕುರಿತಾಗಿ ಸಂಪೂರ್ಣ ತಿಳಿದುಕೊಳ್ಳದೆ ಇದ್ದಲ್ಲಿ ಶಿಕ್ಷಣ ಪರಿಪೂರ್ಣವಾಗುವುದಿಲ್ಲ ಹಾಗೂ ಶಿಬಿರದಲ್ಲಿ ನೀವೆಲ್ಲರರೂ ನೈಜ ಜೀವನ ಶೈಲಿಯನ್ನು ಕಲಿತಿದ್ದೀರಿ, ಎಲ್ಲರೊಂದಿಗೆ ಬೆರೆಯುವ ಹಾಗೂ ನಾಯಕತ್ವ ಗುಣವನ್ನು ಬೆಳೆಸಿಕೊಂಡು ನಿಭಾಯಿಸುವ ಕಲೆಯನ್ನು ತಾವೆಲ್ಲರೂ ಕಲಿತಿದ್ದೀರಿ ಎಂದು ಭಾವಿಸುತ್ತಾ ಎಲ್ಲರಿಗೂ ಶುಭವಾಗಲೆಂದು ತಿಳಿಸಿದರು.

ಸಮಾರೋಪ ಸಮಾರಂಭದಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ಡಾ. ನಂಜುಂಡಪ್ಪ, ಮರಸು ಹೊಸಳ್ಳಿ ವಸತಿ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಕಾಶ್ ಹೆಚ್.ಎಸ್, ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ ಆರ್, ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್, ಸಹಾಯಕ ಪ್ರಾಧ್ಯಾಪಕರಾದ ಶ್ರೀ ನಂಜುಂಡಸ್ವಾಮಿ ಕೆ.ಎಸ್, ಶಿಬಿರದ ಸಹ ಸಂಚಾಲಕರಾದ ಶ್ರೀ ತಮ್ಮಯ್ಯ ಹೆಚ್.ಬಿ, ನೌಕರರಾದ ಶ್ರೀ ಮಹೇಶ್ ಎಸ್ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಮಧ್ಯಾಹ್ನದ ಭೋಜನ ವ್ಯವಸ್ಥೆಯ ಮೂಲಕ ಮೂರು ದಿನದ ಸಮುದಾಯ ವಾಸ್ತವ್ಯ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.

JSS Institute of Education ★ Sakaleshpura, Hassan Dist. ★

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ಸಿಂಹ ಧ್ವನಿ ಕನ್ನಡ ದಿನ ಪತ್ರಿಕೆ ಪುಟ-2

# ಮೂರು ದಿನಗಳ "ಸಮುದಾಯ ವಾಸ್ತವ್ಯ ಶಿಬಿರ" ಕಾರ್ಯಕ್ರಮ

ಆಲೂರು, ಅ.11: ಶಿಕ್ಷಕರು ಉತ್ತಮ ಸಮಾಜದ ನಿರ್ಮಾತೃಗಳು. ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ತಾಲ್ಲೂಕು ಸಿವಿಲ್ ಹಾಗೂ ಜೆ ಎಂ ಎಫ್ ಸಿ ನ್ಯಾಯಾಧೀಶರರಾದ ನಿರ್ಮಲಾ ತಿಳಿಸಿದರು.

ತಾಲ್ಲೂಕು ಮರಸು ಹೊಸಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯ ಸಕಲೇಶಪುರ ಆಯೋಜಿಸಿದ್ದ ಮೂರು ದಿನಗಳ "ಸಮುದಾಯ ವಾಸ್ತವ್ಯ ಶಿಬಿರ" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಬಿರದ ಸದುಪಯೋಗ ಪಡಿಸಿಕೊಳ್ಳುವಂತೆ ಎಂದು ಶುಭ ಹಾರೈಸಿದರು.

ವಕೀಲ ಕೆ.ಜಿ. ನಾಗರಾಜ್ ಮಾತನಾಡಿ, ಪ್ರತಿಯೊಬ್ಬರೂ ವಿವೇಕಾನಂದರ ಆದರ್ಶವನ್ನು ಪಾಲಿಸಬೇಕು, ನಮಗೆ ಎಲ್ಲಾ ವಿದ್ಯಾರ್ಥಿಗಳನ್ನು ಬೆಳೆಸುವ ಘನ ಜವಾಬ್ದಾರಿ ಇದೆ. ಶಿಕ್ಷಕ ವೃತ್ತಿ ಎಲ್ಲಾ ವೃತ್ತಿಗಳಿಗಿಂತಲೂ ಪವಿತ್ರವಾದುದು ಎಂದ ಅವರು ಇಂದು ಹೆಣ್ಣು ಮಕ್ಕಳ ದಿನವಾಗಿದ್ದು ಅದರ ಮಹತ್ವವನ್ನು ತಿಳಿಸಿದರು.




ಶಿಬಿರದ ಮುಖ್ಯ ಅತಿಥಿ, ಮರಸು ಹೊಸಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಎಂ ಎಸ್ ಪ್ರಕಾಶ್ ಮಾತನಾಡಿ, ಶಿಕ್ಷಕರು ತಪ್ಪು ಮಾಡಿದರೆ ಒಂದು ಮುಂದಿನ ಸಮುದಾಯವೇ ತಪ್ಪು ಮಾಡಿದಂತೆ. ಆದುದರಿಂದ ವಿದ್ಯಾರ್ಥಿಗಳನ್ನು ಸರಿಯಾದ ದಾರಿಯಲ್ಲಿ ನಡೆಸುವ ಜವಾಬ್ದಾರಿ ಶಿಕ್ಷಕರಿಗೆ ಇದೆ. ನಮ್ಮ ಜ್ಞಾನವು ನಮ್ಮ ನಡವಳಿಕೆಯಲ್ಲಿ ಪ್ರತಿಬಿಂಬ ಆಗಬೇಕು. ಶಿಕ್ಷಿತರು ಸಮಾಜವನ್ನು ಪರಿವರ್ತನೆ ಮಾಡಬೇಕು. ನಮ್ಮ ಶಿಕ್ಷಣಕ್ಕೆ ಅರ್ಥ ಬರಬೇಕಾದರೆ ಸಮಕಾಲೀನ ಶಿಕ್ಷಣದ ಮಹತ್ವವನ್ನು ತಿಳಿಯಬೇಕು ಎಲ್ಲರೂ ಮುಂದಿನ ದಿನಗಳಲ್ಲಿ ಒಳ್ಳೆಯ ಶಿಕ್ಷಕರಾಗಿ ಶಿಕ್ಷಕ ಹುದ್ದೆಗೆ ತಕ್ಕಂತೆ ಘನತೆಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕಣತೂರು ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪೃಥ್ವಿ ಜಯರಾಮ್ ಶಿಭಿರಾರ್ಥಿಗಳಿಗೆ ಶುಭ ಹಾರೈಸಿದರು.

ಶಿಬಿರದ ಸಂಚಾಲಕರಾದ ಡಾ ವಿಕ್ರಮ್ ಸಿ ಬಿ ರವರು ಶಿಬಿರಾರ್ಥಿಗಳಿಗೆ ಶಿಕ್ಷಕರು ಸಮುದಾಯದೊಂದಿಗೆ ಹೇಗೆ ವರ್ತಿಸಬೇಕೆಂದು ತಿಳಿಸಿ ಶಿಬಿರದ ಯಶಸ್ಸಿಗೆ ನಮ್ಮೆಲ್ಲರ ಸಂಪೂರ್ಣ ಪಾಲ್ಗೊಳ್ಳುವಿಕೆ ಬಹು ಮುಖ್ಯ ಎಂದು ತಿಳಿಸಿದರು.

ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ್ ಆರ್ ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಸಮಯ ಪ್ರಜ್ಞೆ ಮತ್ತು ಕರ್ತವ್ಯನಿಷ್ಠೆ ಇದರ ಬಗ್ಗೆ ತಿಳಿಸುತ್ತಾ ಶಿಬಿರದ ಉದ್ದೇಶ ತಿಳಿಸಿದರು.

ಅಧ್ಯಕ್ಷತೆಯನ್ನು ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ ಎಸ್ ನಂಜುಂಡಪ್ಪ ರವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಆರ್ ಬಿ ಸುರೇಶ್, ಸಹ ಸಂಚಾಲಕರಾದ ಹೆಚ್.ಬಿ ತಮ್ಮಯ್ಯ, ಮಹೇಶ್ ರವರು ಸೇರಿದಂತೆ ಶಿಬಿರಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಸಿಂಹಧ್ವನಿ ದಿನಪತ್ರಿಕೆ – 12 ಅಕ್ಟೋಬರ್ 2023**

# ಶಿಕ್ಷಕರು ಉತ್ತಮ ಸಮಾಜದ ನಿರ್ಮಾತೃ

ಆಲೂರು: ಶಿಕ್ಷಕರು ಉತ್ತಮ ಸಮಾಜದ ನಿರ್ಮಾತೃಗಳು, ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ತಾಲ್ಲೂಕು ಸಿವಿಲ್ ಹಾಗೂ ಜೆ ಎಂ ಎಫ್ ಸಿ ನ್ಯಾಯಾಧೀಶರರಾದ ನಿರ್ಮಲಾ ತಿಳಿಸಿದರು.



ತಾಲ್ಲೂಕು ಮರಸು ಹೊಸಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಜೆ-ಎಸ್ಎಸ್ ಶಿಕ್ಷಣ ಮಹಾವಿದ್ಯಾಲಯ ಸಕಲೇಶಪುರ ಆಯೋಜಿಸಿದ್ದ ಮೂರು ದಿನಗಳ " ಸಮುದಾಯ ವಾಸ್ತವ್ಯ ಶಿಬಿರ " ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಬಿರದ ಸದುಪಯೋಗ ಪಡಿಸಿಕೊಳ್ಳುವಂತೆ ಎಂದು ಶುಭ ಹಾರೈಸಿದರು.

ವಕೀಲ ಕೆ.ಜಿ. ನಾಗರಾಜ್ ಮಾತನಾಡಿ, ಪ್ರತಿಯೊಬ್ಬರೂ ವಿವೇಕಾನಂದರ ಆದರ್ಶವನ್ನು ಪಾಲಿಸಬೇಕು, ನಮಗೆ ಎಲ್ಲಾ ವಿದ್ಯಾರ್ಥಿಗಳನ್ನು ಬೆಳೆಸುವ ಘನ ಜವಾಬ್ದಾರಿ ಇದೆ.

>>2

## ಶಿಕ್ಷಕರು ಉತ್ತಮ ಸಮಾಜದ ನಿರ್ಮಾತೃ

ಶಿಕ್ಷಕ ವೃತ್ತಿ ಎಲ್ಲಾ ವೃತ್ತಿಗಳಿಗಿಂತಲೂ ಪವಿತ್ರವಾದುದು ಎಂದ ಅವರು ಇಂದು ಹೆಣ್ಣು ಮಕ್ಕಳ ದಿನವಾಗಿದ್ದು ಅದರ ಮಹತ್ವವನ್ನು ತಿಳಿಸಿದರು.

ಶಿಬಿರದ ಮುಖ್ಯ ಅತಿಥಿ, ಮರಸು ಹೊಸಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಎಂ ಎಸ್ ಪ್ರಕಾಶ್ ಮಾತನಾಡಿ,

ಶಿಕ್ಷಕರು ತಪ್ಪು ಮಾಡಿದರೆ ಒಂದು ಮುಂದಿನ ಸಮುದಾಯವೇ ತಪ್ಪು ಮಾಡಿದಂತೆ. ಆದುದರಿಂದ ವಿದ್ಯಾರ್ಥಿಗಳನ್ನು ಸರಿಯಾದ ದಾರಿಯಲ್ಲಿ ನಡೆಸುವ ಜವಾಬ್ದಾರಿ ಶಿಕ್ಷಕರಿಗೆ ಇದೆ. ನಮ್ಮ ಜ್ಞಾನವು ನಮ್ಮ ನಡವಳಿಕೆಯಲ್ಲಿ ಪ್ರತಿಬಿಂಬ ಆಗಬೇಕು. ಶಿಕ್ಷಿತರು ಸಮಾಜವನ್ನು ಪರಿವರ್ತನೆ ಮಾಡಬೇಕು. ನಮ್ಮ ಶಿಕ್ಷಣಕ್ಕೆ ಅರ್ಥ ಬರಬೇಕಾದರೆ ಸಮಕಾಲೀನ ಶಿಕ್ಷಣದ ಮಹತ್ವವನ್ನು ತಿಳಿಯಬೇಕು ಎಲ್ಲರೂ ಮುಂದಿನ ದಿನಗಳಲ್ಲಿ ಒಳ್ಳೆಯ ಶಿಕ್ಷಕರಾಗಿ ಶಿಕ್ಷಕ ಹುದ್ದೆಗೆ ತಕ್ಕಂತೆ ಘನತೆಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕಣತೂರು ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪೃಥ್ವಿ ಜಯರಾಮ್ ಶಿಭಿರಾರ್ಥಿಗಳಿಗೆ ಶುಭ ಹಾರೈಸಿದರು.

ಶಿಬಿರದ ಸಂಚಾಲಕರಾದ ಡಾ ವಿಕ್ರಮ್ ಸಿ ಬಿ ರವರು ಶಿಬಿರಾರ್ಥಿಗಳಿಗೆ ಶಿಕ್ಷಕರು ಸಮುದಾಯದೊಂದಿಗೆ ಹೇಗೆ ವರ್ತಿಸಬೇಕೆಂದು ತಿಳಿಸಿ ಶಿಬಿರದ ಯಶಸ್ಸಿಗೆ ನಮ್ಮೆಲ್ಲರ ಸಂಪೂರ್ಣ ಪಾಲ್ಗೊಳ್ಳುವಿಕೆ ಬಹು ಮುಖ್ಯ ಎಂದು ತಿಳಿಸಿದರು.

ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ್ ಆರ್ ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಸಮಯ ಪ್ರಜ್ಞೆ ಮತ್ತು ಕರ್ತವ್ಯನಿಷ್ಠೆ ಇದರ ಬಗ್ಗೆ ತಿಳಿಸುತ್ತಾ ಶಿಬಿರದ ಉದ್ದೇಶ ತಿಳಿಸಿದರು.

ಅಧ್ಯಕ್ಷತೆಯನ್ನು ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ ಎಸ್ ನಂಜುಂಡಪ್ಪ ರವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಆರ್ ಬಿ ಸುರೇಶ್, ಶಿಬಿರದ ಸಹ ಸಂಚಾಲಕರಾದ ಹೆಚ್.ಬಿ ತಮ್ಮಯ್ಯ, ಮಹೇಶ್ ರವರು ಸೇರಿದಂತೆ ಶಿಬಿರಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಜನಹಿತ ದಿನಪತ್ರಿಕೆ – 12 ಅಕ್ಟೋಬರ್ 2023**

JSS Institute of Education * Sakaleshpura, Hassan Dist. *

PRINCIPAL
J.S.S. Institute of Education
P.B. 26, SAKALESHPUR-573 134
Hassan Dist




ಆಲೂರು ಕಸಬಾ ಮರಸು ಹೊಸಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 3 ದಿನಗಳ ಸಮುದಾಯ ವಾಸ್ತವ್ಯ ಶಿಬಿರದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಎಂ. ಸಿ. ನಿರ್ಮಲಾ ಮಾತನಾಡಿದರು.

# ಸಮಾಜದಲ್ಲಿ ಶಿಕ್ಷಕರ ಪಾತ್ರ ಮುಖ್ಯ: ನಿರ್ಮಲಾ

**ಆಲೂರು:** ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಎಂ. ಸಿ. ನಿರ್ಮಲಾ ಹೇಳಿದರು.

ಆಲೂರು ಕಸಬಾ ಮರಸು ಹೊಸಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ, ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯ ಸಕಲೇಶಪುರ ವತಿಯಿಂದ 3 ದಿನಗಳ ಸಮುದಾಯ ವಾಸ್ತವ್ಯ ಶಿಬಿರ ಉದ್ಘಾಟನೆ ನೆರವೇರಿಸಿ ಮಾತನಾಡಿ, ಶಿಬಿರದಲ್ಲಿ ವ್ಯಕ್ತವಾಗುವ ಪ್ರತಿಯೊಂದು ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣ ಮಾಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಎಸ್. ನಂಜುಂಡಪ್ಪ ಮಾತನಾಡಿ, ಶಿಬಿರಾರ್ಥಿಗಳಿಗೆ ಅವಶ್ಯವಿರುವ ಶಿಸ್ತು ಹಾಗೂ ಸಮಯ ಪ್ರಜ್ಞೆ ಮುಂದಿನ ಜೀವನದ ದಾರಿದೀಪ ಎಂದರು.

ವಕೀಲ ಕೆ. ಜಿ. ನಾಗರಾಜ್ ಮಾತನಾಡಿ, ವಿವೇಕಾನಂದರ ಆದರ್ಶವನ್ನು ಜೀವನದಲ್ಲಿ ಪಾಲಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಸಂಚಾಲಕ ವಿಕ್ರಮ್, ಮಾರ್ಗದರ್ಶಕ ಮಂಜುನಾಥ್, ಎಲಿಜಬೆತ್ ಸೋನಿ, ಅಮೃತಾ, ಚಾಂದಿನಿ, ಸುನೀತಾ ಇದ್ದರು.

**ಹೊಸದಿಗಂತ ದಿನಪತ್ರಿಕೆ – 13 ಅಕ್ಟೋಬರ್ 2023**

JSS Institute of Education * Sakaleshpura, Hassan Dist. *

PRINCIPAL
J.S.S. Institute of Education
P.B. 26, SAKALESHPUR-573 134
Hassan Dist



JSS Institute of Education * Sakaleshpura, Hassan Dist.

PRINCIPAL
J.S.S. Institute of Education
P.B. 26, SAKALESHPUR-573 13·
Hassan Dist

JSS Mahavidyapeetha, Mysore - 04
**JSS INSTITUTE OF EDUCATION**
(Recognized by the NCTE and Affiliated to university Mysore, Mysore)
Sakleshpur – 573134, PB No 26, Hassan Dist.
Email: jssioebedskp@gmail.com website: https://jssioebedskp.org.in Phone No: 97405 91647

# Criterion – 03: Research & Outreach Activities

## Key Indicator 3.3-Outreach Activities




**Metric No. 3.3.1 Average number of outreach activities organized by the institution during the last five years**

## 2023-24

# JSS INTITUTE OF EDUCATION

**(Recognized by the NCTE and Affiliated to university Mysore, Mysore)**
**Sakleshpur-573134, PB No 26, Hassan Dist.**
**Email: jssioebedskp@gmail.comwebsite:http://jssioebedskp.org**
**Phone No: 9740591647**


**Date: 18.03.2024**

## ***Report on Health Awareness Programme***

In Association with IQAC, we organised ***Health Awareness Programme*** on 15th of March 2024 Friday, in our JSS Institute of Education, Sakleshpur Taluk, Hassan District, under Science Club at 2:15 PM in main hall. The master of ceremony was done by Smt. Vijayalakshmi Barker, second year teacher trainee. The invocation of programme was done by Gauthami and team, second year teacher trainees.





The programme was followed by welcoming the guests on to the stage and gathering of the programme by Meghana U.P, second year student teacher.

The programme was inaugurated by Principal, Dr. Nanjundappa S, Dr. Dinesh M K, Assistant Professor, Dr.Prabhuswamy M, Assistant Professor, Sri Nanjundaswamy K S, Assistant Professor, Sri Manjunatha R, Assistant Professor and Science Club coordinator Dr. C B Vikram, JSS Institute of Education, Sakleshpur along with the resource persons lighted the lamp.


Followed by the introductory speech about health awareness by Dr. C B Vikram, Co-ordinator of Science Club, JSS Institute of Education, Sakleshpur. Dr. C B Vikram also stresses the importance of health and hygiene in our daily

life. He revealed the prominence of health in order to lead happy and peaceful life. Brief introduction about menstrual cycle and awareness about cancer was delivered in his speech.





On this occasion focus of the programme was to create health awareness among all the teacher trainees, this was followed by guest lecture on "***Insight into Menstrual Cycle***" by the resource person **Smt. V.*T Agnes***, Senior Primary Healthcare Officer, Taluk health office, Sakleshpur. She explained about the process of menstrual cycle, how it takes place in girls, precautions to be taken at this time and how we should maintain hygiene in these days. She explained about the usage of silicon cups at the menstruation period, new innovation the field health world. After the presentation Smt. V.T Agnes was honoured by Dr. Nanjundappa S, Principal, JSS Institute of Education, Sakleshpur.





The programme was followed by the special lecture on "***Awareness about Cancer",*** by the resource person **Smt. *Rani. R***, Block Health Education Officer, Taluk health office, Sakleshpur. She narrated about symptoms, causes, types of cancers and preventive measures to be taken to avoid the cancer disease. She highlighted the treatment pattern for the cancer disease. She explained about Cervical Cancer and Breast Cancer which are very common in women and having high mortality rate in our country. She mainly concentrated on sources and cancer causing agents which are responsible for the disease. She also throws a light on different types of facilities available in Government hospital Sakleshpur and also about doctors working with various specializations. After the presentation Smt. Rani R was honoured by Dr. Nanjundappa S, Principal, JSS Institute of Education, Sakleshpur.





The student teachers were actively participated in the session and had a healthy discussion with recourse persons and cleared their doubts. The presidential speech was given by our Principal, Dr. Nanjundappa S, JSS Institute of Education, Sakleshpur. The programme was concluded by vote of thanks, was done by Pooja B.M second year student teacher. At last the programme was ended with sweets and snacks distribution.

Date: 18/03/2024
Place: Sakleshpur.

Co-ordinator
Science Club

Dr. C.B. Vikram, Ph.D.,
Assistant Professor
JSS Institute of Education
SAKLESHPUR-5731

CO-ORDINATOR
IQAC

Principal

PRINCIPAL
J.S.S. Institute of Education
P.B. 26, SAKALESHPUR-573 134
Hassan Dist